# ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 6
೮—೧೨—೧೯೫೭
★
ಪುಟ ೧೦ ಬೆಲೆ: ೧೩ ನ. ಪೈಸೆ


## ಕಾರ್ಮಿಕರ ಹೋರಾಟವನ್ನು ಹತ್ತಿಕ್ಕಲು ಸರಕಾರದ ಕ್ರೂರ ದಬ್ಬಾಳಿಕೆ ★

ತಮ್ಮ ನ್ಯಾಯವಾದ ಬೇಡಿಕೆಗಳಿಗಾಗಿ ಶಾಂತಯುತವಾಗಿ ಹೋರಾಟ ನಡೆಸುತ್ತಿದ್ದ ವಿಮಾನ ಕಾರ್ಖಾನೆ ನೌಕರರ ಮೇಲೆ ಸರಕಾರವು ಕ್ರೂರ ರೀತಿಯಲ್ಲಿ ದಬ್ಬಾಳಿಕೆ ನಡೆಸಿರುವುದು ಖಂಡನೀಯವಾಗಿದೆ. ಉಪವಾಸ ಸತ್ಯಾಗ್ರಹ ಹೂಡಿದ್ದ ಈರ್ವರು ನಾಯಕರುಗಳಾದ ಶ್ರೀ ಶ್ರೀ ಜ್ವಾಲನಯ್ಯ ಮತ್ತು ರಾಮನ್‌ರವರನ್ನು ದಸ್ತಗಿರಿ ಮಾಡಿ, ಅವರ ಮೇಲೆ ಆತ್ಮಹತ್ಯದ ಆಪಾದನೆ ಹೊರಿಸಿ, ಕೇಸು ಹಾಕಲಾಗಿದೆ. ನಾಗರಿಕ ಸರಕಾರ, ಪ್ರಜಾಪ್ರಭುತ್ವ ಸರಕಾರ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಸರಕಾರದ ಅನಾಗರಿಕತೆಯ ಪ್ರದರ್ಶನಕ್ಕೆ ಇದು ಸಾಕ್ಷಿಯಾಗಿದೆ.

### ಪೋಲೀಸರ ಕುತಂತ್ರ

ನವೆಂಬರ್ 25ರಿಂದ ವಿಧಾನಸೌಧದ ಬಳಿ ನಿರಶನ ವ್ರತವನ್ನು ಆರಂಭಿಸಿದ ವಿಮಾನ ಕಾರ್ಖಾನೆ ನೌಕರರು, ತಮ್ಮ ಹೋರಾಟವನ್ನು ಶಾಂತ ರೀತಿಯಿಂದ ಸಾಗಿಸುತ್ತಿದ್ದರು. ಸಹಸ್ರಾರು ಮಂದಿ ಕಾರ್ಮಿಕರು ಹೋರಾಟಕ್ಕೆ ಸಹಾನುಭೂತಿಯನ್ನು ಸೂಚಿಸಲು ನಿತ್ಯವೂ ಬಂದು ಹೋಗುತ್ತಿದ್ದರು. ಕಾನೂನು ಮತ್ತು ಶಿಸ್ತು ಪಾಲನೆಯ ಹೆಸರಿನಲ್ಲಿ ಪೋಲೀಸರು ನವೆಂಬರ್ 28ರಂದು ಸಭೆ, ಮೆರವಣಿಗೆಗಳನ್ನು ಪ್ರತಿಬಂಧಿಸಿ ಸೆಕ್ಷನ್ 45ನ್ನು ಜಾರಿಗೆ ತಂದಿದೆ.!

ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಎದುರಿಸಲು, ನೌಕರರ ನ್ಯಾಯವಾದ ಬೇಡಿಕೆಗಳಿಗೆ ಬೆಂಬಲ ನೀಡಲು ನವೆಂಬರ್ 30ರಂದು ಕೇಂದ್ರ ಸರಕಾರದ ಇತರ ಕೈಗಾರಿಕೆಗಳಾದ ಹಿಂದುಸ್ಥಾನ್ ಮೆಷಿನ್ ಟೂಲ್ಸ್, ಭಾರತ್ ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಫೋನ್ ಕಾರ್ಖಾನೆ ನೌಕರರು ಮತ್ತು ನಗರದ ಇತರ ಕೈಗಾರಿಕೋದ್ಯಮಗಳ ಕಾರ್ಮಿಕರು ಭಾರೀ ಪ್ರದರ್ಶನವನ್ನು ಏರ್ಪಡಿಸಿದ್ದರು. ಈ ಸೌಹಾರ್ದ ಪ್ರದರ್ಶನವನ್ನು ಹೇಗಾದರೂ ತಡೆಗಟ್ಟಲು ಸರಕಾರವು ದಬ್ಬಾಳಿಕೆಯ ಅಸ್ತ್ರವನ್ನು ಹರಿಬಿಟ್ಟಿತು. ಅಂದು ಬೆಳಗಿನ ಜಾವ 3-30 ಘಂಟೆಯಲ್ಲಿ, ಪೋಲಿಸರು ಧಾಳಿ ನಡೆಸಿ, ಉಪವಾಸ ಮುಷ್ಕರ ನಡೆಸುತ್ತಿದ್ದ ಇಬ್ಬರು ಪ್ರತಿನಿಧಿಗಳನ್ನು ಮತ್ತು ಸಂಘದ ಅಧಿಕಾರಿ ವರ್ಗ ಹಾಗೂ ಸ್ವಯಂಸೇವಕರನ್ನು ದಸ್ತಗಿರಿ ಮಾಡಿತು. ದಸ್ತಗಿರಿ ಮಾಡಿದವರ ಮೇಲೆ ವಿನಾಕಾರಣವಾಗಿ ಕೇಸುಗಳನ್ನು ಹಾಕಲಾಗಿದೆ. ನಗರದಲ್ಲಿ ಸಭೆ, ಮೆರವಣಿಗೆಗಳನ್ನು ಸಂಪೂರ್ಣವಾಗಿ ಪ್ರತಿಬಂಧಿಸಿ, ಬ್ರಿಟಿಷರ ಕಾಲದಿಂದಲೂ ಪರಂಪರಾಗತವಾಗಿ ಬಂದಿರುವ 144ನೇ ಸೆಕ್ಷನ್ನನ್ನು ಸರಕಾರ ಜಾರಿಗೊಳಿಸಿತು.

ವಿಮಾನ ಕಾರ್ಖಾನೆ ನೌಕರರ ಸಂಘದ ಎಲ್ಲ ಪ್ರತಿನಿಧಿಗಳನ್ನು ಸರಕಾರವು ಬಂಧಿಸಿತು. ಸುಮಾರು 80 ಮಂದಿಯನ್ನು ಬಂಧಿಸಿ ಎಲ್ಲರ ಮೇಲೂ ಕೇಸುಗಳನ್ನು ಸರಕಾರ ಹಾಕಿದೆ. ಕಾರ್ಮಿಕರ ನ್ಯಾಯವಾದ ಹೋರಾಟವನ್ನು ದಬ್ಬಾಳಿಕೆಯಿಂದ ಸದೆಬಡಿಯುವ ಸರಕಾರದ ನೀತಿ ಖಂಡನೀಯವಾಗಿದೆ. ಶಾಂತರೀತಿಯಿಂದ ತಮ್ಮ ಹೋರಾಟವನ್ನು ಸಾಗಿಸುವ ದೃಷ್ಟಿಯಿಂದ ಕಾರ್ಮಿಕರು ಡಿಸೆಂಬರ್ 3ರಂದು ನಡೆಯಬೇಕಾಗಿದ್ದ ಸಾರ್ವತ್ರಿಕ ಸಾಂಕೇತಿಕ ಮುಷ್ಕರವನ್ನೂ ಸಹ ಮುಂದುವರಿಸಿ, ತಮ್ಮ ಸಹನೆಯ ಮಿತಿಯನ್ನು ತೋರಿಸಿದ್ದಾರೆ.

### ಎಲ್ಲ ಕೇಸುಗಳು ವಾಪಸಾಗಲಿ

ಕಾರ್ಮಿಕರು ನ್ಯಾಯವಾದ ರೀತಿಯಲ್ಲಿ ಶಾಂತರೀತಿಯಿಂದ ತಮ್ಮ ಹೋರಾಟವನ್ನು ಮುಂದೆ ಸಾಗಿಸುತ್ತಿರುವುದರಿಂದ, ಸರಕಾರವು ಈಗಲಾದರೂ ತನ್ನ ದಬ್ಬಾಳಿಕೆಯ ನೀತಿಯನ್ನು ಕೈಬಿಟ್ಟು ಕೂಡಲೇ ಕೆಲಸಗಾರರ ಪ್ರತಿನಿಧಿಗಳ ಮೇಲೆ ಹಾಕಲಾಗಿರುವ ಎಲ್ಲ ಕೇಸುಗಳನ್ನು ಹಿಂತೆಗೆದುಕೊಳ್ಳಲಿ.

ನಿರಶನ ವ್ರತಿಗಳ ಮೇಲೆ ಹೀನವಾದ ರೀತಿಯಲ್ಲಿ ಆತ್ಮಹತ್ಯೆಯ ಆಪಾದನೆ ಹೊರಿಸಿರುವುದು ಖಂಡನೀಯವಾಗಿದೆ. ಈವರೆಗೆ ಎಷ್ಟೋ ಬಾರಿ ನಿರಶನ ವ್ರತಗಳು ನಡೆದಿವೆ, ಅನೇಕ ಕಾಂಗ್ರೆಸ್ಸಿಗರೇ ಈ ಅನ್ನ ಸತ್ಯಾಗ್ರಹ ನಡೆಸಿದ್ದಾರೆ, ಬ್ರಿಟಿಷ್ ಸರಕಾರವೂ ಸಹ ಮಹಾತ್ಮ ಗಾಂಧಿಯವರು ನಿರಶನವ್ರತ ಆಚರಿಸಿದಾಗ ಇಂಥ ಹೀನವಾದ ಆಪಾದನೆ ಹೊರಿಸುವ ಗೋಜಿಗೆ ಹೋಗಲಿಲ್ಲ. ಇಂದು ಅದೇ ಕಾಂಗ್ರೆಸ್ ಸರಕಾರ ಬ್ರಿಟಿಷ್ ದಬ್ಬಾಳಿಕೆಯನ್ನು ಮೀರಿಸಿದೆ. ಇಂಥ ಹೇಯವಾದ ಆಪಾದನೆಯನ್ನು ಕೂಡಲೇ ಹಿಂತೆಗೆದುಕೊಂಡು ಸರಕಾರವು ಎಲ್ಲ ಕೇಸುಗಳನ್ನು ಹಿಂತೆಗೆದುಕೊಳ್ಳಲಿ.

### ಸಂಧಾನ ಮುಂದುವರಿಯುತ್ತಿದೆ

ಬಂಧಿತರಾಗಿದ್ದ ಎಲ್ಲ ನಾಯಕರನ್ನೂ ಜಾಮೀನು ಕೆತ್ತು ಹೊರಗೆ ತರಲಾಗಿದೆ. ವಿವಿಧ ಕಾರ್ಮಿಕ ನಾಯಕರುಗಳು ಸರಕಾರದೊಂದಿಗೆ, ಕೇಸುಗಳನ್ನು ಹಿಂತೆಗೆದುಕೊಳ್ಳುವಂತೆಯೂ ಮತ್ತು ಹೋರಾಟದಲ್ಲಿ ಭಾಗವಹಿಸಿರುವವರನ್ನು ಮ್ಯಾನೇಜ್‌ಮೆಂಟ್ ಕೆಲಸದಿಂದ ತೆಗೆದು ಹಾಕದಂತೆ ಭರವಸೆ ಕೊಡಬೇಕೆಂತಲೂ ಒತ್ತಾಯಪಡಿಸಿ, ಸಂಧಾನ ನಡೆಸುತ್ತಿದ್ದಾರೆ. ಸಂಧಾನ ಯತ್ನಗಳು ಫಲಕಾರಿಯಾಗಲಿ ಎಂದು ಹಾರೈಸುತ್ತೇವೆ. ಅದೇ ಬಗೆಯಲ್ಲಿ ಕಳೆದ ಮೂರು ವರ್ಷಗಳಿಂದಲೂ ನ್ಯಾಯವಾದ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿರುವ ವಿಮಾನ ಕಾರ್ಖಾನೆ ನೌಕರರ ಬೇಡಿಕೆಗಳು ಕೂಡ ಸಂಧಾನದ ಮೂಲಕ ಇತ್ಯರ್ಥವಾಗಲಿ ಎಂದು ಹಾರೈಸುತ್ತೇವೆ.

5-12-57

---

ಬೆಂಗಳೂರು ಕಾರ್ಪೊರೇಷನ್ ಚುನಾವಣೆ

## ಕಾಂಗ್ರೆಸ್ಸಿಗೊಂದು ಕಾನೂನು; ವಿರೋಧ ಪಕ್ಷಗಳಿಗೆ ಬೇರೆ ಕಾನೂನು

ಈ ತಿಂಗಳ ಅಂತ್ಯದಲ್ಲಿ ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಚುನಾವಣೆ ನಡೆಯುವುದು ಸರಿಯಷ್ಟೆ. ಈಗಾಗಲೇ ಇರುವ 62 ಸ್ಥಾನಗಳಿಗೆ 217 ಮಂದಿ ತಮ್ಮ ಉಮೇದುವಾರಿಕೆ ಪತ್ರಗಳನ್ನು ಸಲ್ಲಿಸಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಬಿಟ್ಟರೆ, ವಿರೋಧ ಪಕ್ಷಗಳಲ್ಲಿ ನಾಗರಿಕ ಸಂಯುಕ್ತ ರಂಗವು ಹೆಚ್ಚು ಸ್ಥಾನಗಳಲ್ಲಿ ಸ್ಪರ್ಧಿಸಿದೆ. ನಾಲ್ಕು ವರ್ಷಗಳ ನಂತರ ನಡೆಯುತ್ತಿರುವ ಈ ಚುನಾವಣೆಗಳ ಪ್ರಚಾರ ಕಾರ್ಯ ಈಗಾಗಲೇ ಬಿರುಸಿನಿಂದ ಸಾಗುತ್ತಿದೆ.

ಈ ಮಧ್ಯೆ ವಿಮಾನ ಕಾರ್ಖಾನೆ ನೌಕರರ ಹೋರಾಟವನ್ನು ಹತ್ತಿಕ್ಕಲು ಸರಕಾರವು 144ನೇ ಸೆಕ್ಷನ್ ಜಾರಿಗೊಳಿಸಿ ಚುನಾವಣಾ ಪ್ರಚಾರ ಕಾರ್ಯಕ್ಕೆ ಅಡ್ಡಿಯನ್ನು ಹಾಕಿದೆ. 144ನೇ ಸೆಕ್ಷನ್ ಜಾರಿಯಲ್ಲಿದೆ ಎಂದರೆ ಯಾವ ಪಕ್ಷವೂ, ವ್ಯಕ್ತಿಗಳು ಸಭೆ, ಮೆರವಣಿಗೆ ಇತ್ಯಾದಿಗಳನ್ನು ನಡೆಸುವಂತಿಲ್ಲ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಈ ಕಾನೂನು ಅನ್ವಯಿಸುವುದಿಲ್ಲವೆಂದು ಈಗ ತಿಳಿದು ಬಂದಿದೆ. ಏಕೆಂದರೆ ಕಾಂಗ್ರೆಸು ಪಕ್ಷದ ಚುನಾವಣಾ ಪ್ರಚಾರದ ಆರಂಭವನ್ನು ಈ ಆಜ್ಞೆ ಜಾರಿಯಲ್ಲಿರುವಾಗಲೇ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಸಭೆ ನಡೆಸಿ ಮಾಡಿದ್ದಾರೆ. ಅಂದರೆ ನಿಜಲಿಂಗಪ್ಪನವರು ತಮ್ಮ ಸರಕಾರದ ಕಾಯಿದೆಯನ್ನೇ ಉಲ್ಲಂಘಿಸಿ ಸಭೆ ನಡೆಸಿದರೆ?

ಏಕೆಂದರೆ ಮೂರನೆಯ ದಿನ ಚುನಾವಣೆಯಲ್ಲಿ ಉಮೇದುವಾರರುಗಳನ್ನು ನಿಲ್ಲಿಸಿರುವ ಕಮ್ಯೂನಿಸ್ಟ್ ಪಕ್ಷವು ಸಭೆ ನಡೆಸಲು ಅನುಮತಿ ಕೇಳಿದ್ದಕ್ಕೆ, ಡಿ. ಎಸ್. ಪಿ. ಸಾಹೇಬರು, 144 ನೇ ಸೆಕ್ಷನ್ ಜಾರಿಯಲ್ಲಿರುವುದರಿಂದ ಸಭೆ ನಡೆಸುವಂತಿಲ್ಲ ಎಂದು ಅರ್ಜಿಯನ್ನು ತಿರಸ್ಕರಿಸಿದರು. ಇದು ಕಾಂಗ್ರೆಸ್ ಇಡಳಿತಗಾರರ ನಿಷ್ಪಕ್ಷಪಾತವಾದ ನೀತಿಯಾಗಿದೆ. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಚ್ಚುವ ನೀತಿಯಾಗಿದೆ.

ಸರಕಾರದ ಈ ನೀತಿಯ ವಿರುದ್ಧವಾಗಿ, 144 ನೇ ಸೆಕ್ಷನ್ ವಿಧಿಸಿರುವುದು ಸರಿಯಲ್ಲವೆಂದು ಸಾರಬೇಕೆಂದು, ಹೈ ಕೋರ್ಟಿನಲ್ಲಿ ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಎಸ್. ಸೂರ್ಯನಾರಾಯಣರಾವ್ ಇವರು ರಿಟ್ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯನ್ನು ಹೈ ಕೋರ್ಟು ಅಂಗೀಕರಿಸಿದೆ.

### ಕಾಂಗ್ರೆಸಿನಲ್ಲಿ ಗೊಂದಲ

ಕಾರ್ಪೊರೇಷನ್ ಚುನಾವಣೆಗೆ ಟಿಕೇಟು ಹಂಚುವ ವಿಷಯದಲ್ಲಿ ಎಂದಿನಂತೆ ಗೊಂದಲವು ಕಾಂಗ್ರೆಸ್ಸಿನಲ್ಲಿ ಏರ್ಪಟ್ಟಿದೆ. ಹಳೆಯ ಕಾಂಗ್ರೆಸ್ಸಿಗರನ್ನು ಮತ್ತು ನಿಷ್ಠಾವಂತರನ್ನು ಈ ಬಾರಿ ಕೈಬಿಡಲಾಗಿದೆ. ಅವರವರು ತಮಗೆ ಬೇಕು ಬೇಕಾದವರಿಗೆ ಸೀಟು ಕೊಟ್ಟಿದ್ದಾರೆ. ಇದರಿಂದ ಕೆರಳಿದ ಕೆಲ ಕಾಂಗ್ರೆಸ್ಸಿಗರು ಸ್ವತಂತ್ರ ಉಮೇದುವಾರರಾಗಿ ನಾಮಕರಣ ಪತ್ರ ಸಲ್ಲಿಸಿದ್ದಾರೆ. ಚುನಾವಣೆಯಲ್ಲಿ ಈ ಬಾರಿ ಕಾಂಗ್ರೆಸ್ಸಿನ ಕೋಟೆ ಮುರಿಯುವುದು ಖಂಡಿತವಾಗಿದೆ. ಕಾಂಗ್ರೆಸ್ಸಿಗರ ಸ್ವಶಕ್ತಿಗಿದ್ದು ಬಲವಾದ ವಿರೋಧ ಪಕ್ಷವಿಲ್ಲದೆ ಹೊಲಸೆದ್ದು ಹೋಗಿರುವ ಕಾರ್ಪೊರೇಷನ್, ಈ ಚುನಾವಣೆಗಳ ನಂತರವಾದರೂ, ಕಾಂಗ್ರೆಸಿನ ಗುತ್ತೇದಾರಿ ಅಳಿದು ಉತ್ತಮಗೊಂಡೀತೆ ಎಂದು ಜನರು ಎದುರು ನೋಡುತ್ತಿದ್ದಾರೆ.

## ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ರಾಷ್ಟ್ರೀಯ ಸಮ್ಮೇಳನ

——

ಭಾರತದ ಎಲ್ಲಾ ಕಡೆಗಳಿಂದ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಪ್ರತಿನಿಧಿಗಳು ಜೋಧಪುರದಲ್ಲಿ ನವೆಂಬರ್ 17ರಿಂದ 20ರ ತನಕ ನಡೆದ ಅವರ ರಾಷ್ಟ್ರೀಯ ಫೆಡರೇಷನ್ನಿನ ಸಮ್ಮೇಳನದಲ್ಲಿ ಭಾಗವಹಿಸಿ, ಈ ಉದ್ಯಮದ ಅಭಿವೃದ್ಧಿ ಬಗ್ಗೆ ಹಾಗೂ ಇದರಲ್ಲಿ ದುಡಿಯುವ ಕಾರ್ಮಿಕರ ಕೆಲಸದ ಜೀವನದ ಸ್ಥಿತಿಗತಿಗಳ ಸುಧಾರಣೆಗಾಗಿ ಮಂಡಿಸಬೇಕಾದ ಕೇಳಿಕೆಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದರು.

ಸಂಚಾರ ಸಾರಿಗೆಯ ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರದಲ್ಲಿರುವ ಬೇರೆ ಬೇರೆ ಕಾರ್ಮಿಕ ಸಂಘಗಳು ಒಂದಾಗಿ ಫೆಡರೇಷನ್ ರಚಿಸಿದ್ದು, ಈ ಸಮ್ಮೇಳನದಲ್ಲಿ ಅವರ ಏಕತೆಯ ಭಾವವು ಎದ್ದು ಕಾಣುವಂತಿತ್ತು. ಈ ಎರಡನೆಯ ಸಮ್ಮೇಳನವು, ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಚಳುವಳಿಯಲ್ಲಿ ಒಂದು ಹಿರಿಯ ಹೆಜ್ಜೆಯಾಗಿದೆ. ಇದರಲ್ಲಿ ಎಲ್ಲಾ ಪ್ರಾಂತಗಳಿಂದ 164 ಪ್ರತಿನಿಧಿಗಳು ಭಾಗವಹಿಸಿದ್ದರು. ಕಳೆದ ಸಮ್ಮೇಳನ ನಡೆದು ಎರಡೇ ವರ್ಷದ ಅವಧಿಯಲ್ಲಿ ಈ ಫೆಡರೇಷನ್ನಿನ ಸದಸ್ಯತ್ವದ ಸಂಖ್ಯೆಯು, 8,000ದಿಂದ 50,000ಕ್ಕೆ ಏರಿದೆ. ಈ 50,000 ಸಂಘಟಿತ ನೌಕರರು ದೇಶದ 4 ಲಕ್ಷ ರೋಡ್ ಟ್ರಾನ್ಸ್‌ಪೋರ್ಟ್ ನೌಕರರನ್ನು ಪ್ರತಿನಿಧಿಸುತ್ತಾರೆ.

ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಸಮಸ್ಯೆಗಳನ್ನು ಹೆಚ್ಚಾಗಿ ಅರಿತಿರುವ ಶ್ರೀ ಟಿ. ಬಿ. ವಿಠಲ್‌ರಾವ್ ಮತ್ತು ಶ್ರೀ ಏ. ಕೆ. ಗೋಪಾಲನ್‌ರವರು ಸ್ವಾಗತ ಭಾಷಣದಲ್ಲಿ, ಈ ಉದ್ಯಮದ ಬಗ್ಗೆ, ಅದರ ಕೆಲಸಗಾರರ ಬಗ್ಗೆ ಸರಕಾರದ ಧೋರಣೆ ಮಾರ್ಪಾಡಾಗಬೇಕೆಂಬುದಾಗಿ ಒತ್ತಿ ಹೇಳಿದರು. ಸಾರ್ವಜನಿಕ ಕ್ಷೇತ್ರದಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಫೆಡರೇಷನ್ನಿನ ಅಧ್ಯಕ್ಷರಾದ ಶ್ರೀ ಶಿಬ್ಬನ್ ಲಾಲ್ ಸಕ್ಸೇನಾರವರು, ಕಳೆದ ಹತ್ತು ವರುಷದ ಸಂಚಾರ ಸಾರಿಗೆಯ ಕಾರ್ಮಿಕರ ಚಳುವಳಿಯನ್ನು ವಿವರಿಸಿ, ಪೋಲೀಸರು ಈ ಹೋರಾಟವನ್ನು ಹೇಗೆ ಹತ್ತಿಕ್ಕಲು ಯತ್ನಿಸಿದರೆಂದೂ, ಸರಕಾರದ ಈ ದಬ್ಬಾಳಿಕೆಯ ನೀತಿ ಖಂಡನೀಯವಾದುದೆಂದೂ ಹೇಳಿದರು.

ಯು. ಪಿ. ಪ್ರತಿನಿಧಿಗಳು ಅಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಮೇಲೆ ನಡೆಸಲಾಗುವ ತೀವ್ರ ದಬ್ಬಾಳಿಕೆಯನ್ನು ವಿವರಿಸಿದರು. ಕೇರಳದ ಪ್ರತಿನಿಧಿಯು, ಅಲ್ಲಿನ ಸರಕಾರ ಈ ಉದ್ಯಮದಲ್ಲಿ ದುಡಿತದ ಅವಧಿಯನ್ನು ಬರೇ ಐದೂವರೆ ಗಂಟೆಗೆ ಇಳಿಸಿದ್ದುದಕ್ಕೂ ಶೇ॥ ಹನ್ನೆರಡೂವರೆ ಬೋನಸ್ಸಿತ್ತುದಕ್ಕೂ ಸರಕಾರವನ್ನು ಅಭಿನಂದಿಸಿದರು. ಇದೇ ಹೊತ್ತಿಗೆ ಇತರ ಪ್ರಾಂತಗಳಲ್ಲಿ 9–10 ಗಂಟೆ ದುಡಿಸಲಾಗುವುದನ್ನು ಗಮನಿಸಲಾಯಿತು.

# ರಾಷ್ಟ್ರೀಯ ಸುದ್ದಿ - ಸಮಾಚಾರಗಳು

ಸಮ್ಮೇಳನದಲ್ಲಿ ಚರ್ಚೆಯಾಗಿ, ಕೂಡಲೇ ಶೇ॥ 25ರಷ್ಟು ಸಂಬಳ ಭಡತಿಯಾಗಬೇಕೆಂಬ, ಕಾರ್ಮಿಕರ ಕೆಲಸದ ಸ್ಥಿತಿಗತಿಗಳನ್ನು ಕ್ರಮಗೊಳಿಸಲು ಒಂದೇ ತೆರನ ಸಾರ್ವತ್ರಿಕ ಕಾನೂನು ಜಾರಿಯಾಗಬೇಕೆಂಬ, ಉದ್ಯಮದ ಮತ್ತಿದರಲ್ಲಿ ದುಡಿಯುವವನ ಸ್ಥಿತಿಗತಿಗಳ ವಿಚಾರಣೆಗೆ ಒಂದು ತ್ರಿಪಕ್ಷ ಸಮ್ಮೇಳನ ಕರೆಯಬೇಕೆಂಬ, ನೌಕರರ ಮೇಲೆ ನಡೆಸುವ ಕ್ರೂರ ದಬ್ಬಾಳಿಕೆ ಮತ್ತು ಮರ್ದನ ನೀತಿಯು ಕೊನೆಗಾಣಬೇಕೆಂಬುವೇ ಮೊದಲಾದ ನಿರ್ಣಯಗಳು ಸ್ವೀಕೃತವಾದುವು.

ಕೊನೆಯದಾಗಿ, ಫೆಬ್ರವರಿ 7 ರಿಂದ 13ರವರೆಗೆ 'ಕೇಳಿಕೆಯ ವಾರ' ಆಚರಿಸಬೇಕೆಂದೂ, ಈ ವಾರದಲ್ಲಿ ಒಂದು ದಿನ 'ಸೌಹಾರ್ದ' ದಿನವನ್ನಾಗಿ ಆಚರಿಸಬೇಕೆಂದೂ ತೀರ್ಮಾನವಾಯಿತು.

### ಹೊಸ ಕಾರ್ಯಕರ್ತರುಗಳು

ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ (ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರ) ಎರಡು ರಾಷ್ಟ್ರೀಯ ಫೆಡರೇಶನ್ನುಗಳಿಗೆ ಕಾರ್ಯಕರ್ತರುಗಳನ್ನು ಚುನಾಯಿಸಲಾಯಿತು. ಸಾರ್ವಜನಿಕ ಕ್ಷೇತ್ರದ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಫೆಡರೇಷನ್ನಿನ ಅಧ್ಯಕ್ಷರಾಗಿ ಶ್ರೀ ಶಿಬ್ಬನ್ ಲಾಲ್ ಸಕ್ಸೇನಾ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಈಶ್ವರ್ ಸಿಂಘರನ್ನೂ ಚುನಾಯಿಸಲಾಯಿತು; ಖಾಸಗಿ ಕ್ಷೇತ್ರದ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಫೆಡರೇಷನ್ನಿನ ಅಧ್ಯಕ್ಷರಾಗಿ ಎಸ್. ಏ. ಡಾಂಗೆ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಸತೀಶ್ ಚಟರ್ಜಿಯವರು ಚುನಾಯಿಸಲ್ಪಟ್ಟರು.

# ಕಾರ್ಮಿಕರ ಟ್ರೇಡ್ ಯೂನಿಯನ್ ಹಕ್ಕಿನ ಮೇಲೆ ಆಘಾತ ಸಲ್ಲದು!

'ಕಾರ್ಮಿಕರ ಮೂಲಭೂತ ಹಕ್ಕುಗಳ ಹಾಗೂ ಸಾಮಾನ್ಯ ಸಾಮಾಜಿಕ ಸ್ವಾತಂತ್ರ್ಯಗಳ ಮೇಲೆ ಸರಕಾರದ ಧಾಳಿಯನ್ನು ನಿಲ್ಲಿಸಲು ಕರೆಯೀಯುವ ಕಾಲ ಸನ್ನಿಹಿತವಾಗಿದೆ.

'ಸರಕಾರ ಇತ್ತೀಚೆಗೆ ಹೊರಡಿಸಿದ ಆಜ್ಞೆಯ ರೀತ್ಯ, ಅಂಗೀಕಾರ ಹೊಂದಿದ ಸಂಘಗಳ ಸದಸ್ಯತ್ವವನ್ನು ಮಾತ್ರ ಸರಕಾರಿ ನೌಕರರು ಹೊಂದಿರಬೇಕೆಂಬುದು, ಕಾರ್ಮಿಕರ ಸ್ವರವನ್ನು ಹತ್ತಿಕ್ಕುವುದಾಗಿದೆ.

'ಈ ಮೇಲಿನ ಆಜ್ಞೆಯ ದುರುಪಯೋಗವನ್ನು ಪಡೆದು, ಅಂಗೀಕಾರವಾಗದ ಯೂನಿಯನಿನ ಸದಸ್ಯರಾಗಿರುವ ಐದನೇ ನಾಲ್ಕು ಪಾಲು ನೌಕರರು ಈ ಯೂನಿಯನಿಗೆ ರಾಜಿನಾಮೆ ಕೊಡಬೇಕೆಂಬ ಒತ್ತಾಯ ಹೇರುವ ಪ್ರಯತ್ನವನ್ನು ರೈಲ್ವೆ ಆಡಳಿತೆ ನಡೆಸಹತ್ತಿದೆ.

'ಸರಕಾರ ಈ ಪ್ರತಿಗಾಮಿ ನೀತಿಯನ್ನೇ ಮುಂದುವರಿಸಿದಲ್ಲಿ, ಅದು ಅಂಗೀಕರಿಸಿದ ಕಾರ್ಮಿಕ ಸಂಘಗಳಿಗೆ (ಆದರಲ್ಲೂ ರೈಲ್ವೆ ಕ್ಷೇತ್ರದಲ್ಲಿ) ಸೇರುವಂತೆ ನೌಕರರನ್ನು ಒತ್ತಾಯಿಸುವಂಥ ತೀರಾ ನೀಚ ಕಾರಸ್ಥಾನವಿದೆಂದು ಆಪಾದಿಸಬೇಕಾಗುತ್ತದೆ. ಹಾಗೂ ಈ ಹೆಜ್ಜೆಗಳು, ಇಂಡಿಯನ್ ಟ್ರೇಡ್ ಯೂನಿಯನ್ ಆ್ಯಕ್ಟನಲ್ಲಿ ಈಯಲಾದ ಹಕ್ಕುಗಳ ಸಂಪೂರ್ಣ ಉಲ್ಲಂಘನೆಯಾಗುತ್ತದೆ. ಸರಕಾರ ಈ ರೀತಿ ಮಾಡಬಾರದೆಂದು ನಾವು ಕೇಳಿಕೊಳ್ಳುತ್ತೇವೆ. ಇವರಿಂದ ಆತ್ಮಾಭಿಮಾನವುಳ್ಳ ನೌಕರರು ಕಟ್ಟಕಡೆಗೆ ನೇರವಾದ ಕಾರ್ಯಕ್ರಮವೆಸಗಿ ನಮ್ಮ ಘಟನೆ ಹಾಗೂ ಸಾಮಾನ್ಯ ಪ್ರಜಾಪ್ರಭುತ್ವ ಹಕ್ಕುಗಳಿಗೆ ಸರಕಾರ ಮನ್ನಣೆ ಕೊಡುವಂತೆ ಮಾಡಬೇಕಾಗುವುದು."

ಮೇಲಿನ ಈ ಹೇಳಿಕೆಯನ್ನು ಲೋಕಸಭಾ ಸದಸ್ಯರುಗಳಾದ ಕಾಂ॥ ಎಸ್.ಏ. ಡಾಂಗೆ (ಏ. ಐ. ಟಿ. ಯು. ಸಿ), ಶ್ರೀನಾಥ್ ಪೈ (ಕೇಂದ್ರ ಸರಕಾರಿ ನೌಕರರ ಕಾನ್‌ಫೆಡರೇಷನ್), ಶ್ರೀ ಫ್ರಾಂಕ್ ಅಂಥೋನಿ (ನೇಷನಲ್ ಯೂನಿಯನ್ ಆಫ್ ರೈಲ್ವೆಮನ್), ಶ್ರೀ ಎಫ್. ಸಿ. ಅಂಥೋನಿ ಪಿಳ್ಳೆ (ಎಚ್. ಎಮ್. ಎಸ್), ಶ್ರೀ ಎಸ್. ಎಮ್. ಬ್ಯಾನರ್ಜಿ (ಅಖಿಲ ಭಾರತ ಡಿಫೆನ್ಸ್ ಎಂಪ್ಲಾಯಿಸ್ ಫೆಡರೇಷನ್), ಮತ್ತು ಶ್ರೀ ಅರಬಿಂದೋ ಘೋಷಾಲ್ (ಅಖಿಲ ಭಾರತ ಆರ್. ಎಂ. ಎಸ್. ಎಂಪ್ಲಾಯೀಸ್ ಯೂನಿಯನ್‌ವರ್ಗ vi), ಇವರುಗಳುಗಳು ಇತ್ತಿರುತ್ತಾರೆ.



## ಈ ಅಂತವಿಲ್ಲದ ರೈಲ್ವೆ ದುರಂತಗಳು

ನವೆಂಬರ್ 23ರ ದಿನ ಕಳೆದ ವರ್ಷ ಅರಿಯಲೂರು ರೈಲ್ವೆ ದುರಂತ ನಡೆದಿತ್ತು, ಈ ವರುಷ ಇದೇ ದಿನ ಮುಂಬಾಯಿ–ಕಲ್ಕತ್ತಾ ಮೇಲು ಹಳಿಬಿಟ್ಟು ಇನ್ನೊಂದು ರೈಲ್ವೆ ದುರಂತ ಒದಗಿದೆ. ಈ ಎರಡು ದುರಂತಗಳ ನಡುವೆ ಹಲವಾರು ಸಣ್ಣ ಪುಟ್ಟ ರೈಲ್ವೆ ಅಪಘಾತಗಳು ನಡೆದಿವೆ. ಇವುಗಳ ಪೈಕಿ, ಸೌತ್ ಈಸ್ಟರ್ನ್ ರೈಲ್ವೆ ಮತ್ತು ನೋರ್ತರ್ನ್ ರೈಲ್ವೆಗಳಲ್ಲಿ ನಡೆದ ಅಪಘಾತಗಳಿಂದ ಕೆಲವು ಜೀವಗಳು ಬಲಿಯಾಗಿವೆ.

ಮೆಹಬೂಬ್ ನಗರ–ಅರಿಯಲೂರಿನಂಥಾ ಭೀಕರ ರೈಲ್ವೆ ದುರಂತಗಳು ನಡೆದು, ನೂರಾರು ಸಾವುಗಳು ಸಂಭವಿಸಿದ್ದು, ದೇಶವಿಡೀ ವಿಚಾರಣೆಯಾಗಬೇಕೆಂಬ ಪ್ರತಿಭಟನೆಯ ಕೂಗೆಬ್ಬಿತ್ತು. ವಿಚಾರಣೆಯೂ ಆಯಿತು. ಇದಾದ ಮೇಲಾದರೂ ಇನ್ನು ಮುಂದೆ ಇಂಥಾ ದುರಂತಗಳು ಸಂಭವಿಸಲಿಕ್ಕಿಲ್ಲವೆಂದು ಸಮಾಧಾನದ ಉಸಿರು ಬಿಡುವ ಮುನ್ನವೆ ಈ ಇನ್ನೊಂದು ದುರಂತ.

ಈಗಿನ ರೈಲ್ವೆ ದುರಂತಕ್ಕೆ ಹಳಿತಪ್ಪಿ ಹೋಗಿರುವುದು, ರೋಲಿಂಗ್ ಸ್ಟಾಕ್ ದೋಷ, ಅಥವಾ ಸಂಚಾಲಕನ ತಪ್ಪು ಇವುಗಳಲ್ಲಿ ಯಾವುದು ಕಾರಣವೆಂದು ಇನ್ನು ತಿಳಿದಿಲ್ಲ. ಆದರೆ ಇದು ತಿಳಿದುಬಂದರೂ, ವಿಚಾರಣೆ ನಡೆದು ತಪ್ಪಿತಸ್ಥರಾರೆಂದೂ ವರದಿ ಬಂದರೂ, ಈ ರೈಲ್ವೆ ದುರಂತಗಳು ಇನ್ನೂ ಮುಂದುವರಿಯುವ ಸಂಭವವಿದೆ ಎಂದೇ ಎನ್ನಬೇಕು. ಯಾಕೆಂದರೆ ಅರಿಯಲೂರು ರೈಲ್ವೆ ದುರಂತದ ವಿಚಾರಣೆ ನಡೆದು, ರೈಲ್ವೆ ಲೈನುಗಳ ಭದ್ರತೆಯ ಮೇಲ್ವಿಚಾರಣೆ ನೋಡಬೇಕಾದ ಇಂಜಿನಿಯರರು ಕರ್ತವ್ಯ ಪಾಲಿಸದಿದ್ದುದು, ಶಾಶ್ವತ ವೇ-ಇನ್‌ಸ್ಪೆಕ್ಟರರ ಬೇಜವಾಬ್ದಾರಿ, ರಾತ್ರಿ ಪೆಟ್ರೋಲ್‌ಮೆನ್‌ಗೆ ಯುಕ್ತ ತರಬೇತಿ ಇಲ್ಲದುದು ಮೊದಲಾದ ಹಲವಾರು ಕಾರಣಗಳಿಂದಾಗಿ ದುರಂತವಾಗಿದೆ ಎಂದು ವಿಚಾರಣೆಯಲ್ಲಿ ಹೇಳಲಾಗಿದೆ.

ಆದರೆ ವಿಚಾರಣಾ ಸಮಿತಿ ರಚಿಸಿದ ಸರಕಾರವಾಗಲೀ, ರೈಲ್ವೆ ಬೋರ್ಡಾಗಲೀ, ಈ ವಿಚಾರಣಾ ಸಮಿತಿ ವರದಿಯ ಪ್ರಕಾರ ಕ್ರಮವೆಸಗಲಿಲ್ಲ. ಫಲ-ಈ ಇನ್ನೊಂದು ರೈಲ್ವೆ ದುರಂತ!

## ಪ್ರತಿಬಂಧಕಾಜ್ಞೆಗೆ ಇನ್ನೂ ಮೂರು ವರ್ಷದ ಜೀವದಾನ!

1950ರಲ್ಲಿ, ವಿರೋಧ ಪಕ್ಷದಹೋರಾಗಳನ್ನುಮಟ್ಟ ಹಾಕಲು, ಕಾರ್ಮಿಕರ ಚಳುವಳಿಯನ್ನು ಮುರಿಯಲು, ಭಾರತ ಸರ್ಕಾರ ಜಾರಿಗೊಳಿಸಿದ ಪ್ರತಿಬಂಧಕಾಜ್ಞೆಯಂಥಾ ಕಪ್ಪು ಶಾಸನಕ್ಕೆ ಇನ್ನೂ ಮೂರು ವರ್ಷದ ಜೀವದಾನ ದೊರಕಿದೆ.

ಲೋಕಸಭೆಯಲ್ಲಿ ಇನ್ನೆರಡು ದಿವಸಗಳಲ್ಲೇ ಸರಕಾರ ಈ ಮಸೂದೆಯನ್ನು ಮಂಡಿಸಲಿರುವುದು.

ಇದು ಸಮಾಜವಾದಿ ಸಮಾಜ ರಚಿಸಹೊರಟಿರುವ ಕಾಂಗ್ರೆಸ್ ಸರಕಾರದ, ನೈತಿಕ ಹಾಗೂ ರಾಜಕೀಯ ದಿವಾಳಿಕೋರತನಕ್ಕೆ ಉತ್ತಮ ನಿದರ್ಶನ. ಈ ಹಿನ್ನೆಲೆಯಲ್ಲಿ ಕೇರಳ ಪ್ರತಿಬಂಧಕಾಜ್ಞೆಯನ್ನು ಮುಂದುವರಿಸಲು ಒಪ್ಪದಿರುವುದನ್ನು ಪ್ರಜಾಪ್ರಭುತ್ವವಾದಿಗಳೆಲ್ಲಾ ಗಮನಿಸಬೇಕಾದ ಅಂಶ.

# ಟಿ. ಟಿ. ಕೆ. - ಈ ಮನುಷ್ಯನ ಕೈಯಲ್ಲಿ ದೇಶದ ಆರ್ಥಿಕವೂ ಗೌರವವೂ ಭದ್ರವಲ್ಲ

ಕೇಂದ್ರದ ಹಣಕಾಸಿನ ಮಂತ್ರಿ ಶ್ರೀ. ಟಿ. ಟಿ. ಕೆ. ಯವರು ತಮ್ಮ ವಿದೇಶ ಪ್ರವಾಸ ಕಾಲದಲ್ಲಿ ಕೊಟ್ಟ ಹೇಳಿಕೆಗಳು ನಮ್ಮ ರಾಷ್ಟ್ರದ ಗೌರವಕ್ಕೆ ಕುಂದು ತರುವಂತಹುದಾಗಿದ್ದೆಂದು ಭಾರತದ ಪ್ರಗತಿಗಾಮಿ ಶಕ್ತಿಗಳು ಖಂಡಿಸಿರುತ್ತವೆ. ಅವರ ವರ್ತನೆಯ ಬಗ್ಗೆ ಲೋಕ ಸಭೆಯಲ್ಲಿ ಸಹ ಕಳೆದ ವಾರ ಚರ್ಚೆ ನಡೆದು ಅನೇಕರು ಅವರನ್ನು ತೀವ್ರವಾಗಿ ಖಂಡಿಸಿದರು. ಇದರ ಬಗ್ಗೆ ಕಮ್ಯೂನಿಸ್ಟ್ ಪಾರ್ಟಿಯವರು ಕೊಟ್ಟಿದ್ದ ನಿರ್ಣಯವನ್ನು ಲೋಕ ಸಭಾಧ್ಯಕ್ಷರು ತಳ್ಳಿಹಾಕಿ ಮಿನೂ ಮಸಾನಿಯವರ ನಿರ್ಣಯವನ್ನು ಚರ್ಚಿಸಲು ಅವಕಾಶವನ್ನಿತ್ತು ಚರ್ಚೆಗೆ ಬೇರೆ ರೂಪ ಕೊಡಲು ಸರಕಾರ ಪ್ರಯತ್ನಿಸಿತ್ತು. ಅಮೆರಿಕನ್ ಏಜಂಟರಾದ ಮಿನು ಮಸಾನಿಯವರು ಮೊದಲು ಮಾತಾಡಿ ಕೃಷ್ಣಮೆನನ್‌ರವರನ್ನು ಕಟುವಾಗಿ ಟೀಕಿಸಿದರು.

ನಂತರ ಮಾತಾಡಿದ ಕಮ್ಯೂನಿಸ್ಟ್ ಪಾರ್ಟಿಯ ಉಪನಾಯಕ ಪ್ರೊ|| ಹಿರೇನ್ ಮುಖರ್ಜಿಯವರು ಅದ್ಭುತ ಭಾಷಣ ಮಾಡೀ ವಿದೇಶದ ಬಂಡವಾಳಗಾರರ ಮನವೊಲಿಸಲು ಟಿ. ಟಿ. ಕೆ. ಯವರು ವರ್ತಿಸಿದ ರೀತಿ ದೇಶದ ಗೌರವಕ್ಕೆ ಕುಂದು ತರುವಂತಹುದಾಗಿತ್ತೆಂದು ಆರೋಪಿಸಿದರು. ನಮ್ಮ ವಿದೇಶಾಂಗ ಮತ್ತು ಆರ್ಥಿಕ ನೀತಿಗಳ ವಿರುದ್ಧ ಆರ್ಥಿಕ ಮಂತ್ರಿಗಳು ಕೊಟ್ಟ ಪ್ರತಿಯೊಂದು ಹೇಳಿಕೆಗಳ ಬಗ್ಗೆಯೂ ಸ್ಪಷ್ಟೀಕರಣ ಅವಶ್ಯವೆಂದವರು ತಿಳಿಸಿದರು.

ಆರ್ಥಿಕ ಮಂತ್ರಿಗಳು ಭಾರತದ ಅವಶ್ಯಕತೆಗಳು ಮತ್ತು ಧ್ಯೇಯ ಧೋರಣೆಗಳ ಬಗ್ಗೆ ವಿದೇಶಗಳಲ್ಲಿ ಸರಿಯಾದ ತಿಳುವಳಿಕೆಯನ್ನು ಕೊಡಲು ಹೋಗಿದ್ದರೆಂದು ಹೇಳಲಾಗಿದೆ. ಆದರೆ "ಈ ಎರಡು ಅಂಶಗಳ ಬಗ್ಗೆಯೂ ಮಂತ್ರಿಗಳು ವಿಫಲರಾಗಿದ್ದಾರೆಂದು ನನ್ನ ಅಭಿಪ್ರಾಯ" ವೆಂದರು.

ವಾಷಿಂಗ್‌ಟನ್ ಮತ್ತು ಲಂಡನ್‌ಗಳಲ್ಲಿ ಆಳುವ ಗುಂಪುಗಳ ಮನವೊಲಿಸಲು ಕಮ್ಯೂನಿಸ್ಟರನ್ನು ಅವಹೇಳನ ಮಾಡಿದ್ದಲ್ಲದೆ, ಭಾರತದ ನೆರೆರಾಷ್ಟ್ರಗಳಾದ ರಷ್ಯ ಮತ್ತು ಚೀನಾಗಳೊಡನೆ ಭಾರತದ ಸಂಬಂಧಕ್ಕೆ ಧಕ್ಕೆ ತರುವಂತೆ ಮಾಡಿದ್ದಾರೆ. ಪಾಕಿಸ್ತಾನ ಮತ್ತು ಪೋರ್ಚುಗಲ್‌ಗಳ ಮೈತ್ರಿ ಕಟ್ಟುವ ಅಮೆರಿಕಾ ಮತ್ತು ಬ್ರಿಟಿಷ್ ಸರ್ಕಾರಗಳನ್ನು ಪ್ರಧಾನ ಮಂತ್ರಿಯವರು "ಅಂತರ ರಾಷ್ಟ್ರೀಯ ದರೋಡೆಕೋರತನ" ವೆಂದು ಖಂಡಿಸಿರುವಾಗ ಆರ್ಥಿಕ ಮಂತ್ರಿಯವರು ಈ ರೀತಿ ವರ್ತಿಸಿದ್ದಾರೆ. ಸೋವಿಯಟ್ ರಷ್ಯದಿಂದ ಸಾಲ ಪಡೆಯಲು ಮಾತುಕತೆ ನಡೆಯುತ್ತಿರುವಾಗಲೇ ಇದನ್ನು ಟಿ. ಟಿ. ಕೆ. ಹೇಳಿರುವುದು. ಆದರೂ ಸಹ ಶೇಕಡ 1½ ಬಡ್ಡಿದರದಲ್ಲಿ ಮೊದಲನೇ ಕಂತನ್ನು 1961ರಲ್ಲಿ ಹಿಂದೆ ಕೊಡುವ ಶರತ್ತುಗಳ ಮೇಲೆ ರೂ. 60 ಕೋಟಿ ಸಾಲ ರಷ್ಯದಿಂದ ದೊರೆತಿರುವುದು ಸಂತೋಷದ ಸಂಗತಿ. ಈ ಶರತ್ತುಗಳ ಮೇಲೆ ಆರ್ಥಿಕ ಮಂತ್ರಿಗಳು ತಮ್ಮ ಅಮೆರಿಕದ ಅಥವಾ ಜರ್ಮನಿಯ ಸ್ನೇಹಿತರಿಂದ ಸಾಲವನ್ನು ಪಡೆಯಲು ಕನಸಿನಲ್ಲೂ ಸಾಧ್ಯವಿಲ್ಲ.

ನಮ್ಮ ವಿದೇಶಾಂಗ ಧೋರಣೆಯನ್ನು ಯಾರಿಗೂ ಮಾರಾಟ ಮಾಡುವುದನ್ನು ಖಂಡಿಸುತ್ತೇನೆ. ನಮ್ಮ ಆರ್ಥಿಕ ಧೋರಣೆ ಮತ್ತು ಕಾರ್ಯಕ್ರಮಕ್ಕೆ ಚ್ಯುತಿ ತರುವುದನ್ನು ಪ್ರತಿಭಟಿಸುತ್ತೇನೆ. ಸಮಾಜವಾದಿ ಸಮಾಜದ ಗುರಿಯನ್ನು ಭಾರತ ಒಪ್ಪಿರುತ್ತದೆ. ಖಾಸಗಿ ಕ್ಷೇತ್ರವಿರಬೇಕೆಂದು ನಾನು ಒಪ್ಪುವುದಾದರೂ ಬಂಡವಾಳಶಾಹಿಗಳ ಹಿತಕ್ಕೆ ಆಶ್ವಾಸನೆ ಕೊಡುವುದರಲ್ಲಿ ಆರ್ಥಿಕ ಮಂತ್ರಿ ಬಹುದೂರ ಹೋಗಿದ್ದಾರೆ. ಟಿ. ಟಿ ಕೆ. ಯವರ ವಾಣಿಜ್ಯ ಮಂತ್ರಿಯಾಗಿದ್ದಾಗ ಅವರು ಅನುಸರಿಸಿದ ನೀತಿಯನ್ನು ಕಟುವಾಗಿ ಟೀಕಿಸಿದ ಕಾ|| ಮುಖರ್ಜಿಯವರು "ನೆಹರುರವರು ನಡುನೀರಿನಲ್ಲಿ ಕುದುರೆ ಬದಲಿಸಕ್ಕೆ ಒಪ್ಪಲಿಕ್ಕಿಲ್ಲ; ಆದರೆ ಅದು ಹಿಡಿತ ತಪ್ಪಿ ಅಪಾಯಕಾರಿಯಾಗದಂತಾದರೂ ಚಾಟಿಯ ಪೆಟ್ಟು ಕೊಟ್ಟು ತಡೆ ಹಿಡಿಯಲು ಪ್ರಯತ್ನಿಸುವುದಗತ್ಯ ಎಂದಂದರು.

## ಪಂಡಿತ್ ಪಂತ್ : ಯೋಜನೆಯ ವೆಚ್ಚದಲ್ಲಿ ಕಡಿತಕ್ಕೆ ಕಮ್ಯೂನಿಸ್ಟರ ವಿರೋಧ ದುರುದ್ದೇಶಪೂರಿತವಂತೆ

ಆರ್ಥಿಕ ಮಂತ್ರಿಯವರ ವಿದೇಶ ಪ್ರವಾಸದ ನಂತರ ಅವರ ಕೈಯಲ್ಲಿ ರಾಷ್ಟ್ರದ ಆರ್ಥಿಕವನ್ನಾಗಲಿ, ಗೌರವವನ್ನಾಗಲಿ ಒಪ್ಪಿಸುವುದು ಯೋಗ್ಯವೇ ಎಂದು ನನಗನ್ನಿಸುತ್ತದೆಂದು ಮುಖರ್ಜಿಯವರು ಸಾರಿದರು.

ಅದೇ ಸಂದರ್ಭದಲ್ಲಿ ಕೃಷ್ಣಮೆನನ್‌ರವರು ಯುಕ್ತರಾಷ್ಟ್ರ ಸಂಸ್ಥೆಯಲ್ಲಿ ಉತ್ತಮ ಕೆಲಸ ನಡಿಸಿದ್ದಾರೆಂದು ಶ್ಲಾಘಿಸಿದರು.

ಆಚಾರ್ಯ ಕೃಪಲಾನಿಯವರು ನಂತರ ಮಾತನಾಡಿ ಟಿ. ಟಿ. ಕೆ. ಯವರ ಭಿಕ್ಷಾಟನೆಯನ್ನು ಖಂಡಿಸಿದರು.

### ಪಂತರ ಪ್ರಲಾಪ

ಪಂಡಿತ್ ನೆಹರೂರವರು ಟಿ. ಟಿ ಕೆ. ಯವರ ಹೇಳಿಕೆ ಬಗ್ಗೆ ಪ್ರಸ್ತಾಪಿಸಿ ಅದನ್ನು ಸ್ಪಷ್ಟೀಕರಿಸಲು ಪ್ರಯತ್ನಿಸಿದರು. ಮತ್ತು ನಮ್ಮ ವಿದೇಶಾಂಗ ನೀತಿಯನ್ನೆಂದೂ ಬದಲಾಯಿಸುವುದಿಲ್ಲವೆಂದು ಘೋಷಿಸಿದರು. ಆದರೆ ಟಿ. ಟಿ. ಕೆ. ಯವರ ಪರ ವಕಾಲತ್ತು ವಹಿಸಿ ಮಾತನಾಡಿದ ಗೃಹಮಂತ್ರಿ ಪಂತ್‌ರವರು ಮಾಡಿದ ಭಾಷಣ ಮಾತ್ರ ವಿಚಿತ್ರವಾಗಿತ್ತು. ಕೃಪಲಾನಿಯವರು ಮಾಡಿದ ಟೀಕೆಗೆ ವ್ಯಥೆ ವ್ಯಕ್ತಪಡಿಸಿ ಮುಖರ್ಜಿಯವರ ಮೇಲೆ ಪ್ರತ್ಯಾರೋಪ ಹೊರಿಸಲು ಪ್ರಯತ್ನಿಸಿದರು. "ಯೋಜನಾ ವೆಚ್ಚದ ಮೊತ್ತ ಕಡಿಮೆಯಾಗಕೂಡದೆಂದು ಕಮ್ಯೂನಿಸ್ಟರು ವಾದಿಸುತ್ತಿರುವ ಉದ್ದಿಶ್ಯ ಪರಿಶುದ್ಧವಾಗಿಲ್ಲವೆಂದು ತೋರಿಸಲು ನನ್ನಲ್ಲ ದಾಖಲೆ ಪತ್ರಗಳಿವೆ" ಎಂದು ಪಂತ್ ಹೇಳಿ ಸುಳ್ಳು ಆರೋಪ ಹೊರಿಸಿದ್ದಾರೆ. ಆದರೆ ಆ ಪತ್ರಗಳಾವುವೆಂಬುದನ್ನು ಹೊರಗೆಡಹಲಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಕಡಿತ ಮಾಡಬಾರದೆಂದು ಕಮ್ಯೂನಿಸ್ಟ್ ಪಾರ್ಟಿಯು ಹೇಳುವುದರಲ್ಲಿ ತಪ್ಪೇನಿದೆ? ಯೋಜನಾ ವೆಚ್ಚದ ಮೊತ್ತವನ್ನು ಕಡಿಮೆ ಮಾಡಬೇಕೆಂದು ನಮ್ಮ ದೇಶದ ಪ್ರತಿಗಾಮಿ ಶಕ್ತಿಗಳೂ ವಿದೇಶೀ ಸಾಮ್ರಾಜ್ಯಶಾಹಿಗಳೂ ಹೇಳುತ್ತಿರುವಾಗ, ಕಮ್ಯೂನಿಸ್ಟ್ ಪಾರ್ಟಿಯು ದೇಶದ ಪ್ರಗತಿಯ ದೃಷ್ಟಿಯಿಂದ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಬೇಕೆಂದು ಒತ್ತಾಯ ತರುತ್ತಿರುವುದು ಸರಕಾರಕ್ಕೆ ಬೆಂಬಲ ಕೊಟ್ಟಂತಿದೆ. ದ್ವಿತೀಯ ಯೋಜನೆಯನ್ನು ಲೋಕಸಭೆ ಅಂಗೀಕರಿಸಿದೆ. ಚುನಾವಣೆ ಕಾಲದಲ್ಲಿ ಕಾಂಗ್ರೆಸ್ ಪಕ್ಷ ಯೋಜನೆಯ ಹೆಸರಲ್ಲಿ ಪ್ರಚಾರ ಮಾಡಿ ಜನತೆಯ ಮತ ಪಡೆದಿತ್ತು. ಯಾವ ಸಂದರ್ಭದಲ್ಲೂ ಯೋಜನೆಯಲ್ಲಿ ಕಡಿತ ಮಾಡಲೊಪ್ಪುವುದಿಲ್ಲವೆಂದು ನೆಹರೂ, ಪಂತ್ ಮತ್ತಿತರು ಅನೇಕ ವೇದಿಕೆಗಳಿಂದ ಸಾರಿದ್ದಾರೆ. ಆದರೆ ಈಗ ಯೋಜನೆಯಲ್ಲಿ ಕಡಿತವಾಗಬಾರದೆಂದು ಕಮ್ಯೂನಿಸ್ಟರು ಹೇಳಿದರೆ "ದುರುದ್ದಿಶ್ಯದಿಂದ" ಎಂದು ಪಂತ್ ಹೇಳುವುದು ಸೋಜಿಗವೆನಿಸುತ್ತದೆ. ಉದ್ದಿಶ್ಯ ಪರಿಶುದ್ಧವಾಗದಿರುವುದು ಕಮ್ಯೂನಿಸ್ಟರದಲ್ಲ; ಸುಳ್ಳು ಆಶ್ವಾಸನೆಗಳನ್ನು ಕೊಟ್ಟು ಜನತೆಗೆ ಮೋಸ ಮಾಡಲು ಪ್ರಯತ್ನಿಸುತ್ತಿರುವ ಪಂತ್ ಮತ್ತು ಅವರ ಸಹೋದ್ಯೋಗಿಗಳದ್ದೆಂದು ಸ್ಪಷ್ಟವಾಗಿದೆ.

ನಮ್ಮ ಮಂತ್ರಿಗಳು ವಿದೇಶಗಳಿಗೆ ಹೋದಾಗ ಆಯಾ ದೇಶಗಳಿಗನುಗುಣವಾಗಿ ವರ್ತಿಸಬೇಕಾಗಿದೆಂದು ಪಂತ್ ಉಪದೇಶ ಮಾಡಿದ್ದಾರೆ. ವಿದೇಶೀ ನೆರವು ಪಡೆಯಲು ಇದೊಂದೇ ದಾರಿಯಂತೆ! ರಾಷ್ಟ್ರ ಗೌರವವನ್ನು ಅಡವಿಟ್ಟು, ದೇಶದ ಧೋರಣೆಯನ್ನು ಪ್ರತಿಗಾಮಿಗಳಿಗೆ ಅನುಕೂಲವಾಗುವಂತೆ ಬದಲಾಯಿಸಲು ಪ್ರಯತ್ನಿಸುವುದು ಪಂತ್‌ರವರಿಗೆ ಸರಿಹೋಗಬಹುದು. ಆದರೆ ಭಾರತದ ಜನತೆ ಅದನ್ನೊಪ್ಪಲು ಸಾಧ್ಯವಿಲ್ಲ. ವಿದೇಶಗಳಿಗೆ ಹೋದಾಗ ಅಲ್ಲಿಯ ಪದ್ಧತಿಯ ಹೊಗಳುಭಟ್ಟರಾಗುವ ನೀತಿ ನಮಗೆ ಹೆಮ್ಮೆ ತರುವಂತಹುದಲ್ಲ. ನಮ್ಮ ವಿದೇಶಾಂಗ ಮತ್ತು ಆಂತರಿಕ ಆರ್ಥಿಕ, ಕೈಗಾರಿಕಾ ನೀತಿಯನ್ನೊಪ್ಪಿ, ಯಾವ ರಾಜಕೀಯ ಕಂಡಿಯೂ ಇಲ್ಲದೆ ನೆರವು ಯಾರಿಂದ ಬಂದರೂ ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಸಹಾಯದ ಹೆಸರಲ್ಲಿ ದೇಶದ ಧೋರಣೆಯನ್ನು ಬದಲಾಯಿಸಲು ಪ್ರಯತ್ನಿಸುವವರಿಂದ ಸಹಾಯ ತೆಗೆದುಕೊಳ್ಳುವುದು ಅಪಾಯಕಾರಕ ಮತ್ತು ಖಂಡನೀಯವಾಗಿದೆ. ಅಮೆರಿಕವು ಇತರ ರಾಷ್ಟ್ರಗಳಿಗೆ ಧನಸಹಾಯ ಮಾಡಿ ಆ ರಾಷ್ಟ್ರಗಳನ್ನು ತನ್ನ ಕೈಗೊಂಬೆಗಳನ್ನಾಗಿ ಮಾಡಲು ಹೇಗೆ ಪ್ರಯತ್ನಿಸುತ್ತಿದೆಂಬುದು ಎಲ್ಲರಿಗೂ ತಿಳಿದ ವಿಷಯ.

ಈಗಿನ ಶೋಚನೀಯ ಪರಿಸ್ಥಿತಿಗೆ ಸರಕಾರದ ಆಂತರಿಕ ಪ್ರತಿಗಾಮಿ ನೀತಿಯೇ ಕಾರಣವೆಂದು ಸ್ಪಷ್ಟವಾಗಿದೆ. ಆಂತರಿಕ ಪ್ರತಿಗಾಮಿ ನೀತಿ ಬದಲಾವಣೆಯಾಗದಿದ್ದರೆ ಪಂಚವಾರ್ಷಿಕ ಯೋಜನೆಗೆ ಧಕ್ಕೆ ತಗಲುವುದೆಂದು ಕಮ್ಯೂನಿಸ್ಟ್ ಪಾರ್ಟಿ ಹಿಂದಿನಿಂದಲೂ ಎಚ್ಚರಿಸಿಕೊಂಡು ಬಂದಿದೆ. ಈ ಹೆಜ್ಜೆ ಇಡಲು ತಯಾರಾಗಿಲ್ಲದ ಪಂತ್, ಟಿ. ಟಿ. ಕೆ. ಯವರು ವಿದೇಶ ನೆರವನ್ನೇ ಅವಲಂಬನೆ ಮಾಡಲು ಹೊರಟಿದ್ದರಿಂದ ದೊಡ್ಡ ಗಂಡಾಂತರ ಒದಗಿದೆ. ಲೋಕಸಭೆಯಲ್ಲಿ ನಡೆದ ಚರ್ಚೆಯಿಂದ ಸಂಶಯ ನಿವಾರಣೆಯಾಗುವ ಬದಲು ತುಂಬ ಕಳವಳಕ್ಕೆಡೆಕೊಟ್ಟಿದೆ. ರಾಷ್ಟ್ರದ ಗೌರವಕ್ಕೂ, ದೇಶದ ಪ್ರಗತಿಗೂ ಯಾವ ಕಡೆಯಿಂದಲೂ ಧಕ್ಕೆ ಬಾರದಂತೆ ಎಚ್ಚರಿಕೆ ವಹಿಸುವುದು ಪ್ರಜಾಪ್ರಭುತ್ವವಾದಿಗಳ ಕರ್ತವ್ಯ.

## ಬೀಡಿ ಕೆಲಸಗಾರರ ರಕ್ಷಣಾ ಮಸೂದೆ

ಬೀಡಿ ಕೆಲಸಗಾರರ ನೌಕರಿ ಮತ್ತು ಕೆಲಸವನ್ನು ಕಾರ್ಖಾನೆಗಳಲ್ಲಿ ನಿಯಂತ್ರಣಗೊಳಿಸುವ ಅನಧಿಕೃತ ಮಸೂದೆಯನ್ನು ಕಾ|| ಎ ಕೆ. ಗೋಪಾಲನ್‌ರವರು ಲೋಕಸಭೆಯಲ್ಲಿ ಕಳೆದವಾರ ಮಂಡಿಸಿದರು. ಮಸೂದೆಗೆ ಕಾಂಗ್ರೆಸ್, ಪಿ. ಎಸ್. ಪಿ. ಆರ್. ಎಸ್. ಪಿ. ಸದಸ್ಯರು ಸಹ ಬೆಂಬಲ ನೀಡಿದ್ದಾರೆ. ಅದರ ಬಗ್ಗೆ ಸರಕಾರವೇ ಕ್ರಮ ತೆಗೆದುಕೊಳ್ಳಲು ಸಾಧ್ಯವಿದೆಂದೂ ವಿಶೇಷ ಶಾಸನ ಅನಗತ್ಯವೆಂದೂ ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಗೋಪಾಲನ್‌ರವರು ಮಸೂದೆಯನ್ನು ಮಂಡಿಸುತ್ತಾ ಈ ಕೈಗಾರಿಯು ಒಂದು ವಿಶಿಷ್ಟ ರೀತಿಯದ್ದಾಗಿದೆಯೆಂದೂ ಮಾಲಕರು ಸುಲಭವಾಗಿ ಕಾನೂನನ್ನುಲ್ಲಂಘನೆ ಮಾಡಲು ಪ್ರಯತ್ನಿಸುತ್ತಿದ್ದಾರೆಂದೂ ತಿಳಿಸಿದರು.

ಈ ಕೈಗಾರಿಕೆಯಲ್ಲಿ ಸುಮಾರು 10 ಲಕ್ಷಕ್ಕೂ ಹೆಚ್ಚು ಮಂದಿ ದುಡಿಯುತ್ತಿದ್ದಾರೆ. ಇದೊಂದು ದೊಡ್ಡದಾದ ಅಸಂಘಟಿತ ಕೈಗಾರಿಕೆಯಾಗಿದೆ. ಕಮಿಷನ್ ಆಧಾರದ ಮೇಲೂ ಕಂಟ್ರಾಕ್ಟ್ ಪದ್ಧತಿಯ ಮೇಲೂ, ಅಥವಾ ಮನೆಗಳಲ್ಲೂ ಕೆಲಸ ನಡಿಸಲಾಗುತ್ತಿದೆ. ಇಲ್ಲೆಲ್ಲೂ ಫ್ಯಾಕ್ಟರಿ ಕಾನೂನಾಗಲಿ, ಕನಿಷ್ಠ ಕೂಲಿ ಕಾನೂನಾಗಲಿ ಅನ್ವಯಿಸುತ್ತಿಲ್ಲ.

ದುಡಿಮೆ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ. ಬೀಡಿ ಕಾರ್ಖಾನೆಗಳಲ್ಲಿ 10-12 ಘಂಟೆ ದೀರ್ಘಕಾಲ ದುಡಿಮೆ ನಡಿಯುತ್ತದೆ. ಚಿಕ್ಕಮಕ್ಕಳೂ ಕೆಲಸ ಮಾಡುತ್ತಾರೆ. ರಜವೆಂಬುದೇ ಇಲ್ಲ. ಹೆಚ್ಚು ಹೆಂಗಸರು ದುಡಿಯುತ್ತಿದ್ದರೂ

(೯ನೇ ಪುಟ ನೋಡಿ)

# ಭಾರತ ಕಮ್ಯೂನಿಸ್ಟ್ ಪಾರ್ಟಿ ಘಟ[ನೆ]

1958 ರ ಜನವರಿ 23 ರಿಂದ 30 ರ ವರೆಗೆ ನಡೆಯಲಿರುವ ಭಾರತ ಕಮ್ಯೂನಿಸ್ಟ್ ಪಕ್ಷದ ವಿಶೇಷ ಅಧಿವೇಶನ ಬಹಳ ಮುಖ್ಯತ್ವದ್ದಾಗಿದೆ. ಕೇಂದ್ರ ಸಮಿತಿಯು ಅಧಿವೇಶನದ ಮುಂದೆ ಈ ಕೆಳಗೆ ಕಾಣಿಸಿರುವ ಬಹು ಮುಖ್ಯವಾದ ಬದಲಾವಣೆಗಳನ್ನು ಪಾರ್ಟಿ ಘಟನೆಗೆ ಸೂಚಿಸಿದೆ. ಕೇಂದ್ರ ಸಮಿತಿಯು ಮಂಡಿಸಲಿರುವ ಈ ಕರಡು ಘಟನೆಯಲ್ಲಿ ಪಾರ್ಟಿಯ ಧ್ಯೇಯವನ್ನು ಕುರಿತು ಪ್ರಸ್ತಾವನೆಯು ಒಳಗೊಂಡಿರುತ್ತದೆ. ಘಟನೆಯಲ್ಲಿ ಸೂಚಿಸಿರುವ ಈ ಬದಲಾವಣೆಗಳನ್ನು ಪಾರ್ಟಿಯ ಬೆಳವಣಿಗೆಯ ದೃಷ್ಟಿಯಿಂದ ಪಾರ್ಟಿಯ ಎಲ್ಲ ಮಟ್ಟಗಳಲ್ಲೂ ಚರ್ಚಿಸುವುದು ಅಗತ್ಯವಿದೆ. ಈ ದೃಷ್ಟಿಯಿಂದ ಅದರ ಪೂರ್ಣ ಪಾಠವನ್ನು ಪಾರ್ಟಿ ಸದಸ್ಯರ ಮತ್ತು ಘಟಕಗಳ ಉಪಯೋಗಕ್ಕಾಗಿ ಇಲ್ಲಿ ಕೊಡಲಾಗಿದೆ. —ಸಂ.

## ಪ್ರಾಥಮಿಕ ಸದಸ್ಯತ್ವ, ಪ್ರಾಥಮಿಕ ಘಟಕಗಳು, ತಾಲ್ಲೂಕು ಸಮಿತಿಗಳು

1. ಪ್ರತಿ ಸದಸ್ಯನೂ ತನ್ನ ಸದಸ್ಯತನದ ಕಾರ್ಡನ್ನು ವರ್ಷಕ್ಕೊಮ್ಮೆ ಮುಂದುವರಿಸುವುದಕ್ಕೆ ಮುನ್ನ, ಆತನು ಸದಸ್ಯನಾಗಿರುವ ಘಟಕವು ಅವನ ಕೆಲಸವನ್ನು ಪರಿಶೀಲಿಸಬೇಕು. ಹೀಗೆ ಮಾಡುವುದರಿಂದ ಇಂದು ಇರತಕ್ಕ ಕೆಟ್ಟ ಚಾಳಿಗಳನ್ನು—ನಿಷ್ಕ್ರಿಯ ಸದಸ್ಯನೆಂದು ಮನಬಂದಂತೆ ತೆಗೆದು ಹಾಕುವ ಅಥವಾ ಒಂದಾನೊಂದು ಕಾಲದಲ್ಲಿ ಖಾಯಂ ಪಾರ್ಟಿ ಸದಸ್ಯರಾಗಿ ಸೇರಿದ್ದು ಎಲ್ಲ ಹಕ್ಕುಗಳನ್ನೂ ಪಡೆದು ಏನೂ ಜವಾಬುದಾರಿ ಹೊರದಿರುವ ಸದಸ್ಯರನ್ನು ಉಳಿಸಿಕೊಂಡಿರುವುದು—ದೂರ ಮಾಡಲು ನಮಗೆ ಸಹಾಯವಾಗುತ್ತದೆ.

2. ಹೊಸದಾಗಿ ಪಾರ್ಟಿಗೆ ದಾಖಲೆಯಾಗುವ ಪ್ರತಿಯೊಬ್ಬನೂ ಪಾರ್ಟಿಯ ಪ್ರತಿಜ್ಞೆಗೆ ಸಹಿ ಹಾಕಬೇಕು.

3. ಈಗಿರತಕ್ಕ ಎರಡಾಣೆ ಮಾಸಿಕ ಚಂದಾ ಸಲ್ಲಿಸುವಿಕೆಯನ್ನು ತೆಗೆದು ಹಾಕಬೇಕು. ಪಾರ್ಟಿಗೆ ಸದಸ್ಯನಾಗಿ ಸೇರುವಾಗ ಅದರ ಬದಲಾಗಿ ವಾರ್ಷಿಕ ಚಂದಾ ಒಂದು ರೂಪಾಯಿ ಇರಬೇಕು ಮತ್ತು ಪಾರ್ಟಿ ಕಾರ್ಡನ್ನು ಮುಂದುವರಿಸುವಾಗ ಇದು ಡಿಸೆಂಬರ್ ಮಾಸದಿಂದ ಜನವರಿ ತಿಂಗಳವರೆಗೆ, ಪ್ರತಿ ವರ್ಷವೂ ನಡೆಯುತ್ತದೆ, ಒಂದು ರೂಪಾಯಿ ಕೊಡಬೇಕು. ಈ ರೀತಿ ಪಾರ್ಟಿ ಚಂದಾದಿಂದ ವಸೂಲಾದ ಹಣದಲ್ಲಿ ಶೇ॥ 10 ಭಾಗ ಕೇಂದ್ರ ಸಮಿತಿಗೂ, ಶೇ॥ 40 ಭಾಗ ಪ್ರಾಂತ ಸಮಿತಿಗೂ ಮತ್ತು ಉಳಿದದ್ದು ಜಿಲ್ಲಾ ಸಮಿತಿ, ಶಾಖೆಗಳು ಮತ್ತು ಸ್ಥಳೀಯ ಸಮಿತಿಗಳ ನಡುವೆ ವಿತರಣೆಯಾಗಬೇಕು.

4. ಎಲ್ಲ ಪಾರ್ಟಿ ಸಮ್ಮೇಳನಗಳಲ್ಲೂ ಪ್ರಾತಿನಿಧ್ಯದ ಸಂಖ್ಯೆಯನ್ನು ಚಂದಾ ಮೊಬಲಗನ್ನು ಎಷ್ಟು ಮೇಲಿನ ಸಮಿತಿಗೆ ಸಲ್ಲಿಸಲಾಗಿದೆಯೋ ಅಷ್ಟು ಮಾತ್ರ ಇರಬೇಕು.

5. ಹದಿನೈದು ಮಂದಿ ಸದಸ್ಯರಿಗಿಂತ ಹೆಚ್ಚು ಇರುವ ಶಾಖೆಗಳು ಕಾರ್ಯಕಾರೀ ಸಮಿತಿಯೊಂದನ್ನು ರಚಿಸಿಕೊಳ್ಳಬೇಕು. ಶಾಖೆಯು ಕೊನೆಯ ಪಕ್ಷ ತಿಂಗಳಿಗೊಮ್ಮೆ ಯಾದರೂ ಸೇರಬೇಕು; ಈ ಸಭೆಗೆ ಕಾರ್ಯಕಾರೀ ಸಮಿತಿಯು ಕೆಲಸದ ಬಗ್ಗೆ ವರದಿಯನ್ನು ಮತ್ತು ತನ್ನ ಸಲಹೆಗಳನ್ನು ಮಂಡಿಸಬೇಕು. ಶಾಖೆಯು ಪಾರ್ಟಿಯ ಘಟಕ ಮಾತ್ರವೇ ಅಲ್ಲದೆ ರಾಜಕೀಯ ಮತ್ತು ಸಾಮೂಹಿಕ ಚಟುವಟಿಕೆಯ ಸಂಘಟಕವೂ ಆಗಿರುತ್ತದೆ. ಆದ್ದರಿಂದ ಇದನ್ನು ಅನುಕೂಲವಾದ ಆಧಾರದ ಮೇಲೆ—ಅಂದರೆ ಹಳ್ಳಿಗಳು, ಪಂಚಾಯತ್‌ಗಳು, ಮುನಿಸಿಪಲ್ ವಾರ್ಡುಗಳು, ಬೀದಿಗಳು ಮತ್ತು ಮೊಹಲ್ಲಾಗಳು ಹಾಗೂ ಕಾರ್ಖಾನೆಗಳು, ಕೆಲಸದ ಸ್ಥಳಗಳು ಮತ್ತು ಸಂಸ್ಥೆಗಳು ಎಲ್ಲಿ ಅಗತ್ಯವೋ ಅಲ್ಲಿ—ರಚಿಸಬೇಕು.

6. ಎಲ್ಲಿ ಶಾಖೆಯ ಸದಸ್ಯತನವು 25ಕ್ಕಿಂತ ಜಾಸ್ತಿ ಇದೆಯೊ ಅಲ್ಲಿ ಅದನ್ನು ಅನುಕೂಲಕ್ಕೆ ತಕ್ಕಂತೆ ತಂಡಗಳಾಗಿ ವಿಭಾಗಿಸಬೇಕು. ಪ್ರತಿ ತಂಡವೂ ಒಬ್ಬ ನಾಯಕನನ್ನು ಹೊಂದಿರುವುದು. ಈ ತಂಡದ ಕಾರ್ಯವು ಪ್ರತಿ ಸದಸ್ಯನಿಗೆ ಕೆಲಸವನ್ನು ಹಂಚುವುದು ಮತ್ತು ಪರಿಶೀಲಿಸುವುದಾಗಿರುತ್ತದೆ. ಅದು ತನಗೆ ಬೇಕಾಗಿರುವಂಥ ಹೊಸ ಸದಸ್ಯರನ್ನು ಪಾರ್ಟಿಗೆ ಸೇರಿಸಿಕೊಳ್ಳಲು ಶಾಖೆಯ ಸಮಿತಿಗೆ ಶಿಫಾರಸು ಮಾಡಬಹುದು. ಹೊಸ ಸದಸ್ಯನನ್ನು ಸೇರಿಸಿಕೊಳ್ಳುವಾಗ ಅದು ಶಾಖೆಯ ಸಭೆಯಲ್ಲಿ ಅನುಮೋದನೆಯಾಗಬೇಕು.

7. ಪಾರ್ಟಿಯ ಧೋರಣೆಗಳ ಬಗ್ಗೆ ಚರ್ಚೆಯು ಸಾಧಾರಣವಾಗಿ ಪಾರ್ಟಿ ಶಾಖೆಗಳಲ್ಲಿ ನಡೆಯುತ್ತದೆ. ಎಲ್ಲಿ ಪ್ರಾರಂಭದ ಚರ್ಚೆಯು ಅಗತ್ಯವೆಂದು ಕಾಣಬರುವುದೋ ಅಲ್ಲಿ ಮಾತ್ರ ತಂಡಗಳಲ್ಲಿ ಮೊದಲು ಚರ್ಚೆ ಆಗಬಹುದು.

8. ಶಾಖೆ ಮತ್ತು ಜಿಲ್ಲಾ ಸಮಿತಿಯ ನಡುವೆ ಇನ್ನೊಂದು ಸಮಿತಿಯನ್ನು—ಅಂದರೆ ತಾಲೂಕಾ, ಸಬ್-ಡಿವಿಷನ್, ತಹಶೀಲ್ ಅಥವಾ ನಗರ ಸಮಿತಿ—ಒಟ್ಟು ಸದಸ್ಯರ ಸಂಖ್ಯೆಯು 200ಕ್ಕಿಂತ ಹೆಚ್ಚಿದ್ದರೆ ರಚಿಸಬಹುದು.

9. ಶಾಖೆಯ ಸಮಿತಿಯು ತನ್ನ ಮೇಲಿನ ಸಮಿತಿಗೆ ಎರಡು ತಿಂಗಳಿಗೊಮ್ಮೆ ಹೊಸ ಸದಸ್ಯರನ್ನು ಸೇರಿಸಿಕೊಂಡಿರುವುದರ ಬಗ್ಗೆ ವರದಿಯನ್ನು ಕಳುಹಿಸಬೇಕು. ಮೇಲಿನ ಸಮಿತಿಯು ಪಟ್ಟಿಯನ್ನು ನೋಡಿ ಪರಿಶೀಲಿಸುವುದು ಮತ್ತು ಅದಕ್ಕೆ ಯಾವ ಸದಸ್ಯತ್ವವನ್ನೇ ಆಗಲಿ, ತಿರಸ್ಕರಿಸುವ ಹಕ್ಕು ಇರುತ್ತದೆ.

10. ಎಲ್ಲಿ ಅಗತ್ಯವೋ ಅಲ್ಲಿ, ತಾನು ಕೆಲಸ ಮಾಡುವ ಅಥವ ವಾಸಿಸುವ ಪ್ರದೇಶದ ಶಾಖೆಯ ಸದಸ್ಯನಾಗಿರುವುದೇ ಅಲ್ಲದೆ ತಾನು ಕೆಲಸ ಮಾಡುತ್ತಿರುವ ಅಥವಾ ವಾಸಿಸುತ್ತಿರುವ ಪ್ರದೇಶದ ಇನ್ನೊಂದು ಶಾಖೆಯಲ್ಲಿ ಸಹ ಸದಸ್ಯನಾಗಿರಬಹುದು.

11. ಪಾರ್ಟಿ ಘಟನೆಯಲ್ಲಿರುವಂತೆ ಹೊಸದಾಗಿ ಪಾರ್ಟಿ ಸದಸ್ಯನಾಗಿ ಸೇರುವವನು ಮೊದಲು ಸ್ವಲ್ಪ ಕಾಲ ಕ್ಯಾಂಡಿಡೇಟ್ ಆಗಿರಬೇಕೆಂಬ ಅಂಶವನ್ನು 1958ರ ಅಂತ್ಯದವರೆಗೆ ತಳ್ಳಿ ಹಾಕಲಾಗಿದೆ. ತದನಂತರ ಪರಿಸ್ಥಿತಿಯನ್ನು ಪರಿಶೀಲಿಸಲಾಗುವುದು.

●

## ಅಖಿಲ ಭಾರತ ಪಾರ್ಟಿ ನಾಯಕತ್ವದ ಅಂಗಗಳು

1. ಅಖಿಲ ಭಾರತ ಪಾರ್ಟಿ ಅಧಿವೇಶನವು 100 ಮಂದಿಯನ್ನುಳ್ಳ ರಾಷ್ಟ್ರೀಯ ಮಂಡಲಿಯನ್ನು ಆರಿಸುವುದು. ರಾಷ್ಟ್ರೀಯ ಮಂಡಲಿಯ ಚುನಾವಣೆಗೋಸ್ಕರವಾಗಿ ಪ್ರತಿ ಪ್ರಾಂತಕ್ಕೂ ಸಾಧಾರಣವಾಗಿ ಸದಸ್ಯರ ಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯವನ್ನು ಗೊತ್ತುಮಾಡಲಾಗುವುದು, ಕೊನೆಯ ಪಕ್ಷ ಒಂದು ಸ್ಥಾನವನ್ನಾದರೂ ಪ್ರತಿ ಪ್ರಾಂತಕ್ಕೂ ಕಾದಿರಿಸಲಾಗುವುದು. ರಾಷ್ಟ್ರೀಯ ಮಂಡಳಿಗೆ ಸದಸ್ಯರ ಪಟ್ಟಿಯನ್ನು ಪ್ರತಿ ಪ್ರಾಂತವೂ ಪ್ರಾಂತದ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ ತಯಾರಿಸುವುದು. ಯಾವ ಪ್ರತಿನಿಧಿಯೇ ಆಗಲಿ ತನ್ನ ಪ್ರಾಂತದ ಪ್ರತಿನಿಧಿ ಮಂಡಲವು ಸೂಚಿಸಿರುವ ಹೆಸರು ಸರಿಯಲ್ಲವೆಂದಾಗಲೀ ಹೊಸ ಹೆಸರನ್ನು ಸೇರಿಸಬೇಕೆಂದು ಅಪೇಕ್ಷೆಪಟ್ಟರಾಗಲೀ ಆಗ ತನ್ನ ಅಭಿಪ್ರಾಯವನ್ನು ಅಧಿವೇಶನದ ಮುಂದಿರಿಸಲು ಹಕ್ಕು ಇರುತ್ತದೆ. ಇದಲ್ಲದೆ ರಾಷ್ಟ್ರೀಯ ಮಂಡಲಿಯ ಸದಸ್ಯರ ಒಟ್ಟು ಸಂಖ್ಯೆಯ ಶೇ॥ 10ಕ್ಕೆ ಮೀರದಂತೆ ಸದಸ್ಯರ ಹೆಸರನ್ನು ಕೇಂದ್ರ ಕಾರ್ಯಕಾರೀ ಸಮಿತಿಯು ನೇರವಾಗಿ ಸೂಚಿಸಬಹುದು. ಉಳಿದ ಪಟ್ಟಿಗಳ ಮೇಲೆ ಬದಲಾವಣೆ ಸೂಚಿಸುವಂತೆಯೇ ಈ ಪಟ್ಟಿಯ ಮೇಲೂ ಬದಲಾವಣೆಯನ್ನು ಸೂಚಿಸಬಹುದು. ಅದೇ ರೀತಿಯಲ್ಲಿ, ಈ ಪಟ್ಟಿಯಲ್ಲಿನ ಚುನಾವಣೆಯು ಸಹ ಅದೇ ಕ್ರಮದಲ್ಲಿ ಜರುಗುವುದು.

2. ರಾಷ್ಟ್ರೀಯ ಮಂಡಲಿಯು 21 ಮಂದಿಯನ್ನೊಳಗೊಂಡ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆರಿಸುವುದು.

3. ಪಾರ್ಟಿಯ ಎರಡು ಅಧಿವೇಶನಗಳ ನಡುವೆಯ ಕಾಲದಲ್ಲಿ ರಾಷ್ಟ್ರೀಯ ಮಂಡಲಿಯು ಪಾರ್ಟಿ ಧೋರಣೆಯನ್ನು ರೂಪಿಸುವುದರಲ್ಲಿ ಉನ್ನತ ಅಂಗವಾಗಿರುತ್ತದೆ. ಸಾಧಾರಣವಾಗಿ ಅದು ಆರು ತಿಂಗಳಿಗೊಮ್ಮೆ ಕೂಡುತ್ತದೆ. ಅದು ಕೇಂದ್ರ ಕಾರ್ಯಕಾರಿ ಸಮಿತಿಯು ಮಂಡಿಸುವ ವರದಿಯನ್ನು ಚರ್ಚಿಸುತ್ತದೆ ಮತ್ತು ರಾಜಕೀಯ ಹಾಗೂ ಸಂಘಟನಾತ್ಮಕ ನಿರ್ಣಯಗಳನ್ನು ಚರ್ಚಿಸುತ್ತದೆ.

4. ಕೇಂದ್ರ ಕಾರ್ಯಕಾರೀ ಸಮಿತಿಯು ಎರಡು ತಿಂಗಳಿಗೊಮ್ಮೆ ಸೇರುತ್ತದೆ. ಅದು ರಾಷ್ಟ್ರೀಯ ಮಂಡಲಿಯ ತೀರ್ಮಾನಗಳನ್ನು ಜಾರಿಗೊಳಿಸುತ್ತದೆ, ರಾಷ್ಟ್ರೀಯ ಮಂಡಲಿಯು ರೂಪಿಸಿರುವ ಧೋರಣೆಗೆ ಅನುಗುಣವಾಗಿ ಸಾಮೂಹಿಕ ಚಳುವಳಿಯ ವಿಶಿಷ್ಟ ಸಮಸ್ಯೆಗಳನ್ನು ಬಗೆಹರಿಸುವುದು ಮತ್ತು ಪ್ರಾಂತ ಸಮಿತಿಗಳಿಗೆ ಸಹಾಯ ನೀಡುವುದು.

5. ಕೇಂದ್ರ ಕಾರ್ಯಕಾರೀ ಸಮಿತಿಯ ಎಲ್ಲ ಸದಸ್ಯರೂ ರಾಷ್ಟ್ರೀಯ ಮಂಡಲಿಯ ಸಭೆಗಳಲ್ಲಿ ಭಾಗವಹಿಸುವಾಗ ಅದರ ಬಹುಮತದ ತೀರ್ಮಾನಗಳನ್ನು ಕಾರ್ಯಗತಗೊಳಿಸುವರು. ಕೇಂದ್ರ ಕಾರ್ಯಕಾರೀ ಸಮಿತಿಯ ಯಾವ ಸದಸ್ಯನೇ ಆಗಲಿ, ರಾಷ್ಟ್ರೀಯ ಮಂಡಲಿಯ ಸಭೆಗೆ ಸಮಿತಿಯು ಒಪ್ಪಿಸುವ ಸಲಹೆಗಳು ಸರಿಯಲ್ಲವೆಂದು ಭಾವಿಸಿದಲ್ಲಿ ಅದನ್ನು ವಿರೋಧಿಸಬೇಕೆಂದು ಭಾವಿಸಿದಲ್ಲಿ, ಕೇಂದ್ರ ಕಾರ್ಯಕಾರೀ ಸಮಿತಿಯ ಅನುಮತಿಯನ್ನು ಪಡೆದು ಮಾತ್ರ ಹಾಗೆ ಮಾಡಬಹುದು.

6. ರಾಷ್ಟ್ರೀಯ ಮಂಡಲಿಯ ಎಲ್ಲ ತೀರ್ಮಾನಗಳಿಗೂ ಕೇಂದ್ರ ಕಾರ್ಯಕಾರೀ ಸಮಿತಿಯು ಬದ್ಧವಾಗಿರುತ್ತದೆ.

7. ಕೇಂದ್ರ ಕಾರ್ಯಕಾರೀ ಸಮಿತಿಯು ಒಬ್ಬ ಪ್ರಧಾನ ಕಾರ್ಯದರ್ಶಿ ಮತ್ತು ನಾಲ್ಕು ಕಾರ್ಯದರ್ಶಿಗಳನ್ನು ಹೊಂದಿರುತ್ತದೆ, ಈ ಐದು ಮಂದಿಯು ಕೇಂದ್ರ ಕಾರ್ಯಕಾರೀ ಸಮಿತಿಯ ಸೆಕ್ರೆಟೇರಿಯಟ್ಟಾಗಿರುತ್ತಾರೆ. ಸೆಕ್ರೆಟೇರಿಯಟ್ಟಿನ ಸದಸ್ಯರುಗಳು ಕೇಂದ್ರ ಕಾರ್ಯಕಾರೀ ಸಮಿತಿಯ ವಿಶಿಷ್ಟ ಅಂಗಗಳ ಅಧಿಕಾರಿಗಳಾಗಿರುತ್ತಾರೆ ಮತ್ತು ಸಂಪೂರ್ಣವಾಗಿ ಪಾರ್ಟಿ ಕೇಂದ್ರದ ಕೆಲಸದಲ್ಲಿ ನಿರತರಾಗಿರುತ್ತಾರೆ. ರಾಷ್ಟ್ರೀಯ ಮಂಡಲಿಯು ರೂಪಿಸಿದ ಧೋರಣೆಗಳಿಗೆ ಅನುಗುಣವಾಗಿ ಮತ್ತು ಕೇಂದ್ರ ಕಾರ್ಯಕಾರೀ ಸಮಿತಿಯ ತೀರ್ಮಾನಗಳಿಗನುಸಾರವಾಗಿ ಸೆಕ್ರೆಟೇರಿಯಟ್ ದೈನಂದಿನ ಘಟನೆಗಳ ಬಗ್ಗೆ ವ್ಯವಹರಿಸುತ್ತದೆ. ಪ್ರಮುಖವಾದ ರಾಜಕೀಯ ಮತ್ತು ಸಂಘಟನಾತ್ಮಕ ಪ್ರಶ್ನೆಗಳ ಮೇಲೆ, ಸೆಕ್ರೆಟೇರಿಯಟ್ಟು ಸ್ವತಃ ತೀರ್ಮಾನಗಳನ್ನು ತೆಗೆದುಕೊಳ್ಳುವುದಿಲ್ಲ, ಕೇಂದ್ರ ಕಾರ್ಯಕಾರೀ ಸಮಿತಿಯ ಸಭೆಯನ್ನು ಕರೆಯುತ್ತದೆ. ಕೇಂದ್ರ ಕಾರ್ಯಕಾರೀ ಸಮಿತಿಯು ಪ್ರಶ್ನೆಯನ್ನು ತಾನೇ ತೀರ್ಮಾನಿಸುತ್ತದೆ, ಇಲ್ಲವೇ ಪ್ರಶ್ನೆಯ ಮುಖ್ಯತ್ವ ದೃಷ್ಟಿಯಲ್ಲಿ ಅಗತ್ಯವೆಂದು ಕಂಡುಬಂದಲ್ಲಿ ರಾಷ್ಟ್ರೀಯ ಮಂಡಲಿಯ ಸಭೆಯನ್ನು ಸೇರಿಸುತ್ತದೆ.

8. ರಾಷ್ಟ್ರೀಯ ಮಂಡಲಿಯು ಕೇಂದ್ರ ಕಾರ್ಯಕಾರೀ ಸಮಿತಿಯನ್ನು ಪುನರ್ರಚಿಸಬಹುದು ಮತ್ತು ಯಾವ ಸದಸ್ಯನನ್ನಾದರೂ ತೆಗೆದು ಹಾಕಬಹುದು.

9. ಕೇಂದ್ರ ಕಾರ್ಯಕಾರೀ ಸಮಿತಿಯ ಸದಸ್ಯರುಗಳು ಪಾರ್ಟಿ ಅಧಿವೇಶನದಲ್ಲಿ ಅಧಿಕಾರ ಪ್ರಯುಕ್ತ ಪ್ರತಿನಿಧಿಗಳಾಗಿರುತ್ತಾರೆ. ಇತರ ಎಲ್ಲ ಪ್ರತಿನಿಧಿಗಳೂ ಚುನಾಯಿತರಾದವರಾಗಿರುತ್ತಾರೆ.

## ಪ್ರಾಂತೀಯ ಮತ್ತು ಜಿಲ್ಲಾ [...]

● ಪ್ರಾಂತ ಸಮ್ಮೇಳನವು ನೂರುಮಂದಿಗೆ ಮೀರದಿರುವ ಪ್ರಾಂತೀಯ ಮಂಡಲಿಯನ್ನು ಆರಿಸುತ್ತದೆ. ಪ್ರಾಂತೀಯ ಮಂಡಲಿಯ ಎರಡು ಪ್ರಾಂತ ಸಮ್ಮೇಳನದ ಅಧಿವೇಶನಗ[...] ದಲ್ಲಿ ಪ್ರಾಂತದ ಉ[...] ತ್ತದೆ. ಅದು ಪ[...] ಧೋರಣೆಗಳನ್ನು [...] ದಾರಿಯನ್ನು ಹೊಂ[...] ಯ ಮಂಡಲಿಯ ನಿ[...] ಪ್ರಾಂತಸಮ್ಮೇಳನ[...] ಸಾಮಾನ್ಯವಾಗಿ [...] ತಿಂಗಳಿಗೊಮ್ಮೆ ಸೇ[...]

2. ಪ್ರಾಂತೀಯ[...] ಮಂದಿಗೆ ಮೀರದ[...] ಯೊಂದನ್ನು ಎರಡು[...] ಯ ಸಭೆಯ ನ[...] ಪಾರ್ಟಿ ಕೆಲಸ[...] ಮೀಯಲು ರಚಿಸು[...] ತಿಯು ಪ್ರಾಂತೀ[...] ಯನ್ನು ಮತ್ತು [...] ಆರಿಸುತ್ತದೆ.

3. ಪ್ರಾಂತ [...] ಪ್ರಾಂತೀಯ ಮಂ[...] ಭಾಗವಹಿಸುವಾಗ [...] ನಗಳನ್ನು ಜಾರಿಗೆ [...] ಸಮಿತಿಯ ಯಾ[...] ಪ್ರಾಂತ ಸಮಿತಿ[...] ವಿರೋಧಿಸಲು [...] ಸಮಿತಿಯ ಅನು[...] ಮಾತ್ರ ಹಾಗೆ ಮಾ[...]

4. ಪ್ರಾಂತ ಸ[...] ಪ್ರಾಂತ ಸಮ್ಮೇ[...] ಪ್ರಯುಕ್ತ ಪ್ರತಿನಿಧಿ[...]

5. ಜಿಲ್ಲಾ [...] ಮಂದಿಗೆ ಮೀರದ[...] ಒಟ್ಟು ಸದಸ್ಯರಸಂ[...] ಯಾವುದು ಕಡಿಮೆ[...] ಯುಳ್ಳ ಜಿಲ್ಲಾ ಮ[...] ವುದು. ಜಿಲ್ಲಾ [...] ಅಧಿವೇಶನಗಳ [...] ಯಲ್ಲಿ ಅದು ಉನ್ನ[...]

6. ಜಿಲ್ಲಾ ಮಂ[...] ಮೀರದ ಜಿಲ್ಲಾ ಸ[...] ತ್ತದೆ. ಜಿಲ್ಲಾ ಸ[...] ಟೇರಿಯಟ್ಟನ್ನು ರ[...]

7. ಈ ವಿಭ[...] ನಿಯಮಾವಳಿ (3[...] ಅನ್ವಯಿಸುತ್ತದೆ.

8. ಐದುನೂ[...] ಗಿಂತ ಹೆಚ್ಚು ಸದ[...] ಮೂರುಮಂದಿಯ[...] ಟೇರಿಯಟ್ಟನ್ನು ಹ[...]

9. ಶಾಖೆಗಳ[...] ತಿಯ ನಡುವೆ, [...] ಹೆಚ್ಚು ಮಂದಿ ಇ[...] ಯನ್ನು ರಚಿಸಬ[...]

## ...ದ ಕೇಂದ್ರ ಸಮಿತಿಯ ಗೊತ್ತುವಳಿ

ಕೇಂದ್ರ ಕಾರ್ಯಕಾರೀ ಸಮಿತಿಯ ತೀರ್ಮಾನವು ಕೊನೆಯದಾಗಿರುತ್ತದೆ. ಪಾರ್ಟಿ ಅಧಿವೇಶನಕ್ಕೆ ಅಪೀಲು ಹೋಗುವ ಅವಕಾಶವು ಇರುತ್ತದೆ.

ಘಟಕಗಳು ಮತ್ತು ಪಾರ್ಟಿಯ ಸದ... ಸ್ಯತ್ವದ ಬಗ್ಗೆಯೂ ತನ್ನ... ಯನ್ನು ನಿರ್ವಹಿಸಲು ಅಸಮರ್ಥವಾಗಿದೆ. ಅಭಿಪ್ರಾಯವಾಗಿ, ಪಾರ್ಟಿಯು ತನ್ನ ಬಳ... ಕೆಯಿಂದ ಕಾರ್ಯಾಚರಣೆಯಲ್ಲಿ ತೊಡಗಿ... ಸುವುದಕ್ಕೆ ಅವು ಅಧಿಕಾರವನ್ನು ... ಗೌರವವನ್ನು ಹೊಂದಿಲ್ಲವಾಗಿವೆ. ಪಾರ್ಟಿ ಶಿಕ್ಷಣವನ್ನು ವಿಸ್ತರಿಸಲು ಮತ್ತು ಪಾ... ಪತ್ರಿಕೆಗಳ ಮಟ್ಟವನ್ನು ಹೆಚ್ಚಿಸಲು ಬಹಳ ಕಡಿಮೆ ಕೆಲಸವನ್ನು ಮಾಡಲಾಗಿದೆ. ಚು... ನಾವಣೆಗಳ ಕಾಲದಲ್ಲಿ ಚಟುವಟಿಕೆಯಿಂದ ಕೂಡಿದ್ದ ಬಹು ಸಂಖ್ಯಾತ ಕಾಮ್ರೇಡುಗಳು ಮತ್ತೆ ಅಕ್ರಿಯರಾಗುತ್ತಿದ್ದಾರೆ. ಎಲ್ಲ ಘಟಕಗಳಲ್ಲೂ ಪಾರ್ಟಿಯ ಹಣಕಾಸಿನ ಪರಿಸ್ಥಿತಿ ಚಿಂತಾಜನಕವಾಗಿದೆ, ಪಾರ್ಟಿ ಕೆಲಸಕ್ಕೆ ಅಗತ್ಯವಿರುವಂಥ ಪೂರ್ಣಕಾಲದ ಪಾರ್ಟಿ ಕೆಲಸಗಾರರು ಅನಿವಾರ್ಯವಾಗಿ ಜೀವನ ನಡೆಸಲು ಕೆಲಸ ಹುಡುಕಬೇಕಾಗಿ ಬಂದಿದೆ. ಅನೇಕ ವಿಷಯಗಳ ಮೇಲೆ ತಾತ್ವಿಕ ಗೊಂದಲವಿದೆ. ವರ್ಗಗಳ ರೀತಿಗೆ ವಿರೋಧವಾಗಿರುವಂಥ, ಹವ್ಯಾಸಗಳು, ಚಾಳಿಗಳು, ಪಾರ್ಟಿಯೊಳಗೆ ಸಾಕಷ್ಟು ಪ್ರವೇಶಿಸಿವೆ.

# ...ಗೆ ಸೂಚಿಸಲಾಗಿರುವ ಬದಲಾವಣೆಗಳು

...ಯ ಕಾಲ
...ಂಗವಾಗಿರು
...ಸಂಬಂಧಿಸಿ
...ಜವಾಬು
...ಪ್ರಾಂತೀ
...ಂಖ್ಯೆಯನ್ನು
...ನಿಸುವುದು.
...ಯು ಆರು

...ಲಿಯು 21
...ತ ಸಮಿತಿ
...ಯುಮಂಡಲಿ
...ಅವಧಿಯಲ್ಲಿ
...ಾರ್ಗದರ್ಶನ
...ಪ್ರಾಂತ ಸಮಿ
...ಾರ್ಯದರ್ಶಿ
...ರಿಯಟ್ಟನ್ನು

...ಸದಸ್ಯರು
...ಸಭೆಯಲ್ಲಿ
...ದ ತೀರ್ಮಾ
...ಪ್ರಾಂತ
...ರೇ ಆಗಲಿ
...ಲಹೆಗಳನ್ನು
...ಪ್ರಾಂತ
...ಪಡೆದು

...ದಸ್ಯರುಗಳು
...ಅಧಿಕಾರ
...ತ್ತಾರೆ.
...ವು 100
...ಜಿಲ್ಲೆಯ
...ಡ 10ರಷ್ಟು
...ಸಂಖ್ಯೆ
...ನ್ನು ಆರಿಸು
...ದ ಎರಡು
...ಯಲ್ಲಿ ಜಿಲ್ಲೆ
...ಾಗಿರುತ್ತದೆ.
...15ಮಂದಿಗೆ
...ನ್ನು ಆರಿಸು
...ತನ್ನ ಸೆಕ್ರೆ
...ತ್ತದೆ.
...ರೂಪಿಸಿರುವ
...ಸಮಿತಿಗೂ

...ಸದಸ್ಯರಿ
...ಜಿಲ್ಲೆಯು
...ಲ್ಲಾ ಸೆಕ್ರೆ
...ದೆ.
...ಜಿಲ್ಲಾ ಸಮಿ
...ಗಳು

...ಸದಸ್ಯರಿಗಿಂತ
...ಯ ಸಮಿತಿ

### ಪಾರ್ಟಿ ಅಧಿವೇಶನ ಮತ್ತು ಸಮ್ಮೇಳನದ ನಡುವೆಯ ಕಾಲಾವಧಿ

ನಮ್ಮ ಪ್ರಸಕ್ತ ಘಟನೆಗೆ ಅನುಸಾರವಾಗಿ, ಪಾರ್ಟಿ ಸಮ್ಮೇಳನಗಳು ಮತ್ತು ಪಾರ್ಟಿ ಅಧಿವೇಶನವು ಎರಡು ವರ್ಷಗಳಿಗೊಮ್ಮೆ ನಡೆಯಬೇಕಾಗಿದೆ. ಇದನ್ನು ಮೂರು ವರ್ಷಗಳಿಗೊಮ್ಮೆ ಆಗುವಂತೆ ಬದಲಾಯಿಸಬೇಕೆಂದು ನಾವು ಸೂಚಿಸುತ್ತೇವೆ.

### ಪಾರ್ಟಿ ಅಧಿವೇಶನ ಮತ್ತು ಸಮ್ಮೇಳನಗಳಲ್ಲಿ ಚರ್ಚೆ

1. ಪಾರ್ಟಿ ಅಧಿವೇಶನಕ್ಕೆ ಎರಡು ತಿಂಗಳ ಮುಂಚಿತವಾಗಿ, ರಾಷ್ಟ್ರೀಯ ಮಂಡಲಿಯು ಕರಡು ನಿರ್ಣಯಗಳನ್ನು ಎಲ್ಲ ಪಾರ್ಟಿ ಘಟಕಗಳಲ್ಲೂ ಚರ್ಚೆಗೋಸ್ಕರವಾಗಿ ಪ್ರಕಟಿಸುವುದು. ನಿರ್ಣಯಗಳಿಗೆ ತಿದ್ದುಪಡಿಗಳನ್ನು ನೇರವಾಗಿ ಕೇಂದ್ರ ಕಾರ್ಯಕಾರೀ ಸಮಿತಿಗೆ ವಿಂಗಡನೆಮಾಡಿ ಪಾರ್ಟಿ ಅಧಿವೇಶನದ ಮುಂದಿರಿಸಲು ಕಳಿಸಲಾಗುವುದು.

2. ಪಾರ್ಟಿ ಅಧಿವೇಶನಕ್ಕಾಗಿ ಡಾಕ್ಯುಮೆಂಟ್‌ಗಳನ್ನು ಪ್ರಕಟಣೆ ಮಾಡುವುದಕ್ಕಾಗಿ ಸೇರುವ ರಾಷ್ಟ್ರೀಯ ಮಂಡಲಿಯ ಸಭೆಯು ಪ್ರಾಂತೀಯ ಸಮ್ಮೇಳನಗಳು ಮುಕ್ತಾಯಗೊಂಡಮೇಲೆ ಸಮಾವೇಶಗೊಳ್ಳುತ್ತದೆ.

3. ಸಂಬಂಧಪಟ್ಟ ಸಮಿತಿಗಳು ಒಪ್ಪಿಸುವ ವರದಿಗಳ ಮತ್ತು ತೀರ್ಮಾನಗಳ ಆಧಾರದ ಮೇಲೆ ಪ್ರತಿ ಹಂತದಲ್ಲೂ ಸಮ್ಮೇಳನಗಳು ಜರಗುತ್ತವೆ.

## ಸಮಿತಿಗಳು ಮತ್ತು ಸೆಕ್ರೆಟೇರಿಯಟ್ಟುಗಳಲ್ಲಿ ದ್ವಿಸದಸ್ಯತ್ವ ಮತ್ತು ಬಹು ಸದಸ್ಯತ್ವ

ಪ್ರಸ್ತುತದಲ್ಲಿ ಅನೇಕ ಕಾಮ್ರೇಡುಗಳು ಅನೇಕ ಸಮಿತಿಗಳ ಸದಸ್ಯರುಗಳಾಗಿದ್ದಾರೆ. ಇದರಿಂದಾಗಿ, ಅವರ ಹೆಚ್ಚು ಸಮಯವು ಸಮಿತಿಯ ಸಭೆಗಳಲ್ಲಿ ಭಾಗವಹಿಸುವುದೇ ಆಗಿ ಪಾರ್ಟಿ ಕೆಲಸವನ್ನಾಗಲೀ ಸಾಮೂಹಿಕ ಕೆಲಸವನ್ನಾಗಲೀ ಅವರು ಪರಿಣಾಮಕಾರಿಯಾಗಿ ಮಾಡದಾಗಿದ್ದಾರೆ, ಈ ಪರಂಪರೆಯನ್ನು ಒಮ್ಮೆಲೇ ನಿವಾರಿಸುವುದು ಸಾಧ್ಯವಿಲ್ಲ. ಅದೇ ಸಮಯದಲ್ಲಿ, ಕೆಲವು ಕನಿಷ್ಠ ನಿಯಮಗಳನ್ನು ಗುರ್ತಿಸಬೇಕು ಮತ್ತು ಪರಿಣಾಮಕಾರಿಯದೂ ಕೆಲಸದ ದೃಷ್ಟಿಯಿಂದ ಅದನ್ನು ಜಾರಿಗೊಳಿಸಬೇಕು. ಇದಕ್ಕಾಗಿ ಹೀಗೆ ಸೂಚಿಸಲಾಗಿದೆ.

1. **ಕೇಂದ್ರ ಸೆಕ್ರೆಟೇರಿಯಟ್ಟಿನ** ಯಾವ ಸದಸ್ಯರೂ ಪ್ರಾಂತೀಯ ಅಥವಾ ಜಿಲ್ಲಾ ಸಂಸ್ಥೆಗಳಲ್ಲಿ-ಮಂಡಲಿ, ಸಮಿತಿ ಅಥವಾ ಸೆಕ್ರೆಟೇರಿಯಟ್ಟಿನಲ್ಲಿ ಸದಸ್ಯರಾಗಿರಕೂಡದು.

2. **ಪ್ರಾಂತ ಸಮಿತಿಯ ಸೆಕ್ರೆಟೇರಿಯಟ್ಟಿನ** ಯಾವ ಸದಸ್ಯರೂ ಜಿಲ್ಲಾ ಮಂಡಲಿಯ, ಸಮಿತಿಯ ಅಥವಾ ಸೆಕ್ರೆಟೇರಿಯಟ್ಟಿನ ಸದಸ್ಯರಾಗಿರಕೂಡದು.

### ಕಂಟ್ರೋಲ್ ಕಮಿಷನ್

ನಮ್ಮ ಪ್ರಸಕ್ತ ಘಟನೆಗೆ ಅನುಸಾರವಾಗಿ, ಕೇಂದ್ರ ಕಂಟ್ರೋಲ್ ಕಮಿಷನ್ ನೇರವಾಗಿ ಪಾರ್ಟಿ ಅಧಿವೇಶನದಲ್ಲಿ ಆಯ್ಕೆಯಾಗುತ್ತದೆ, ಆದರೆ ಅದರ ಪರಿಶೀಲನೆಗಳು ಮತ್ತು ಶಿಫಾರಸುಗಳು ಕೇಂದ್ರ ಸಮಿತಿಯ ಅನುಮತಿಗೆ ಒಳಗಾಗಿದೆ. ಈಗ ನಾವು ರಾಷ್ಟ್ರೀಯ ಮಂಡಲಿಯನ್ನು ರಚಿಸುವ ಸಲಹೆ ಇತ್ತಿರುವುದರಿಂದ ಕಂಟ್ರೋಲ್ ಕಮಿಷನ್ ರಚಿಸುವ ರೀತಿ ಮತ್ತು ಅದರ ಕಾರ್ಯವನ್ನು ಪುನರ್ಪರಿಶೀಲಿಸುವುದು ಅಗತ್ಯ.

ಪಾರ್ಟಿಯ ಸಂಘಟನಾ ರೂಪವನ್ನು ಮತ್ತು ಘಟನೆಯನ್ನು ಬದಲಿಸುವುದಲ್ಲದೆ ಕೇಂದ್ರ ಸಮಿತಿಯು ಪಾರ್ಟಿಯು ತನ್ನ ರಾಜಕೀಯ ಮತ್ತು ಸಾಮೂಹಿಕ ಕಾರ್ಯಭಾರವನ್ನು ನೀಗಿಸುವಂಥ ರೀತಿಯಲ್ಲಿ ಪಾರ್ಟಿಯನ್ನು ಪುನರ್ಘಟಿಸುವ ವಿಷಯಕ್ಕೆ ಸಂಬಂಧಿಸಿದ ಅನೇಕ ಇತರ ಸಮಸ್ಯೆಗಳನ್ನು ಚರ್ಚಿಸಿತು.

ದೇಶದ ರಾಜಕೀಯ ಜೀವನದಲ್ಲಿ ನಮ್ಮ ಪಾರ್ಟಿಯು ಬೃಹತ್ ಶಕ್ತಿಯಾಗಿ ಬೆಳೆದಿದೆ. ಕೇರಳ ಸರಕಾರದಲ್ಲಿ ಅದು ನಾಯಕತ್ವದಲ್ಲಿರುವ ಪಕ್ಷವಾಗಿದೆ, ಭಾರತದ ಪಾರ್ಲಿಮೆಂಟಿನಲ್ಲಿ ಅದು ವಿರೋಧ ಪಕ್ಷದಲ್ಲಿ ಪ್ರಮುಖವಾದುದಾಗಿದೆ ಮತ್ತು ಪಶ್ಚಿಮ ಬಂಗಾಳಾ ಮತ್ತು ಆಂಧ್ರ ಪ್ರಾಂತಗಳಲ್ಲಿ ಮುಖ್ಯವಾದ ವಿರೋಧಪಕ್ಷವಾಗಿದೆ, ಮತ್ತು ಇತರ ಎಲ್ಲ ಪ್ರಾಂತಗಳ ಶಾಸನ ಸಭೆಗಳಲ್ಲೂ ಅದು ತನ್ನ ಪ್ರತಿನಿಧಿಗಳನ್ನು ಪಡೆದಿದೆ. ಪ್ರಧಾನವಾಗಿ ಕಾರ್ಮಿಕವರ್ಗದ ಪ್ರದೇಶಗಳಲ್ಲಿ ಅದು ಅನೇಕ ಸ್ಥಾನಗಳನ್ನು ಗಳಿಸಿದೆ ಮತ್ತು ಅದು ಕಾರ್ಮಿಕವರ್ಗದ ನಾಯಕತ್ವದ ಶಕ್ತಿಯಾಗಿದೆ. ನಮ್ಮ ಗೌರವವು ಅಧಿಕಗೊಂಡಿದೆ ಮತ್ತು ನಮ್ಮ ರಾಜಕೀಯ ಪ್ರಭಾವವು ಪಾರ್ಟಿ ಇತಿಹಾಸದಲ್ಲಿ ಹಿಂದೆಂದಿಗಿಂತಲೂ ಇಂದು ಅಮಿತವಾಗಿದೆ. ಲಕ್ಷಾಂತರ ಜನತೆ ತಮ್ಮ ಜೀವನವನ್ನು ಉತ್ತಮಗೊಳಿಸಿಕೊಳ್ಳುವ ಹೋರಾಟದಲ್ಲಿ ನಾಯಕತ್ವಕ್ಕಾಗಿ ನಮ್ಮ ಕಡೆ ಎದುರು ನೋಡುತ್ತಿದ್ದಾರೆ.

## ಪಾರ್ಟಿಯನ್ನು ಪುನರ್ಘಟಿಸುವುದು

ಕೇಂದ್ರ ಸಮಿತಿಯು ಈ ಸಲಹೆಗಳನ್ನು ಮುಂದಿರಿಸುತ್ತದೆ:

1. ಕೇಂದ್ರ ಕಂಟ್ರೋಲ್ ಕಮಿಷನ್ ರಾಷ್ಟ್ರೀಯ ಮಂಡಲಿಯಿಂದ ಆಯ್ಕೆಯಾಗುತ್ತದೆ. ಕಂಟ್ರೋಲ್ ಕಮಿಷನ್ನಿಗೆ ಸದಸ್ಯರಾಗಿ ಚುನಾಯಿತರಾಗಲು ಯಾವ ಸಮಿತಿಯ ಸದಸ್ಯರುಗಳ ಮೇಲೂ ಪ್ರತಿಬಂಧಕವಿರುವುದಿಲ್ಲ.

2. ಪ್ರಾಂತ ಸಮಿತಿಗಳೂ ಸಹ ತಮ್ಮ ಪ್ರಾಂತಗಳಲ್ಲಿ ಕಂಟ್ರೋಲ್ ಕಮಿಷನ್ ರಚಿಸಿಕೊಳ್ಳುವುವು.

3. ಕಂಟ್ರೋಲ್ ಕಮಿಷನ್ ಈ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತವೆ:

(1) ಕೇಂದ್ರ ಕಾರ್ಯಕಾರೀ ಸಮಿತಿ ಅಥವ ಅದರ ಸೆಕ್ರೆಟೇರಿಯಟ್ಟು ವಹಿಸುವ ಪ್ರಶ್ನೆಗಳು;

(2) ಪ್ರಾಂತ ಸಮಿತಿ ಅಥವಾ ಪ್ರಾಂತೀಯ ಮಂಡಲಿಯು ಶಿಸ್ತಿನ ಕ್ರಮ ತೆಗೆದುಕೊಂಡಿರುವ ವಿಷಯಗಳು;

(3) ಯಾವುದೇ ಒಂದು ಪಾರ್ಟಿ ಘಟಕವು ಸದಸ್ಯನನ್ನು ಹೊರಹಾಕಿರುವ ಬಗ್ಗೆ ಸಂಬಂಧಪಟ್ಟ ಸದಸ್ಯನು ಮಾಡುವ ಆಪೀಲುಗಳನ್ನು ಪರಿಶೀಲಿಸುವುದು.

4. ಸಾಮಾನ್ಯವಾಗಿ ಕಂಟ್ರೋಲ್ ಕಮಿಷನ್ನಿನ ತೀರ್ಮಾನಗಳು ಕೊನೆಯದಾಗಿರುವುದು, ಕೇಂದ್ರ ಕಾರ್ಯಕಾರೀ ಸಮಿತಿ ಅಪೇಕ್ಷೆ ಪಟ್ಟಲ್ಲಿ ಅಥವಾ ಅದರ ಸೆಕ್ರೆಟೇರಿಯಟ್ಟು ಅಪೇಕ್ಷಿಸಿದಲ್ಲಿ ಅಥವಾ ಸಂಬಂಧಪಟ್ಟ ಪ್ರಾಂತ ಸಮಿತಿಯು ಅಪೇಕ್ಷಿಸಿದಲ್ಲಿ ತೀರ್ಮಾನವನ್ನು ಬದಲಾಯಿಸಬಹುದು. ಅಂಥ ಸಂದರ್ಭಗಳಲ್ಲಿ

ಇದು ನಮ್ಮ ಮೇಲೆ ಬೃಹತ್ತರವಾದ ಜವಾಬುದಾರಿಯನ್ನು ಹೊರಿಸಿದೆ. ಆದರೆ ಪಾರ್ಟಿಯೊಳಗಿನ ಪರಿಸ್ಥಿತಿಯು ಜನತೆಯ ನಡುವೆ ನಮಗಿರುವ ಅಂತಸ್ತಿಗೆ ಅನುಗುಣವಾಗಿಲ್ಲ. ಎಲ್ಲ ಕಾಮ್ರೇಡುಗಳಿಗೂ ತಿಳಿದಿರುವಂತೆ ಪರಿಸ್ಥಿತಿಯು ಯಾವ ರೀತಿ ಇರಬೇಕಿತ್ತೋ ಆ ರೀತಿ ಇಲ್ಲ.

ಪಾರ್ಟಿಯ ಎಲ್ಲ ಹಂತಗಳಲ್ಲಿಯೂ ಶಿಸ್ತು ಸಡಿಲುಗೊಂಡಿದೆ. ಅಲ್ಲದೆ ಅಧಿಕಾರಶಾಹಿ ವರ್ತನೆಯು ವಿವಿಧ ರೂಪಗಳಲ್ಲಿ ವ್ಯಕ್ತಗೊಳ್ಳುತ್ತಿದೆ. ಸಜೀವವಾದ ಪಾರ್ಟಿ ಜೀವನವು ನಮ್ಮಲ್ಲಿ ಕಾಣಲಾಗದಿದೆ ಮತ್ತು ಪ್ರಜಾಪ್ರಭುತ್ವ ಕೇಂದ್ರೀಕರಣದ ಆಧಾರದ ಮೇಲೆ ಇರುವ ಪರಿಣಾಮಕಾರಿಯಾದ ಪ್ರಜಾಪ್ರಭುತ್ವವು ಇಲ್ಲವಾಗಿದೆ. ನಾಯಕತ್ವದಲ್ಲಿರುವ ನಮ್ಮ ಸಮಿತಿಗಳು, ಮುಖ್ಯವಾಗಿ ಕೇಂದ್ರ ಸಮಿತಿ ಮತ್ತು ಪ್ರಾಂತ ಸಮಿತಿಗಳು, ಸೈದ್ಧಾಂತಿಕ, ರಾಜಕೀಯ ಹಾಗೂ ಸಂಘಟನಾತ್ಮಕ ಕ್ಷೇತ್ರಗಳಲ್ಲಿ ಕನಿಷ್ಠ ಜವಾಬುದಾರಿಗಳನ್ನು ನಿರ್ವಹಿಸಲು ಅಸಮರ್ಥವಾಗಿವೆ ಮತ್ತು ಜನತೆ, ಸಾಮೂಹಿಕ ರಂಗಗಳು, ಕೆಳಗಿನ

ಈ ಸಮಸ್ಯೆಗಳನ್ನು ಪರಿಹರಿಸಲಿಕ್ಕಾಗಿ ಸಮರ್ಪಕವಾದ ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳದಿದ್ದಲ್ಲಿ ಕೇವಲ ಹೊಸ ಸದಸ್ಯರುಗಳನ್ನು ಕೂಡಿಸುವುದರಿಂದೇನೂ ಹೆಚ್ಚು ಪ್ರಯೋಜನವಾಗದು. ಸದಸ್ಯರನ್ನು ಕೂಡಿಸುವುದು ಅಗತ್ಯ, ಆದರೆ ಅದೇ ಸಮಯದಲ್ಲಿ ನಾವು ಈ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳಬೇಕು. ಪಾರ್ಟಿಯನ್ನು ವಿಸ್ತರಿಸಲು ತೀರ್ಮಾನಿಸಿರುವುದರಿಂದಾಗಿ ಇದು ಇನ್ನೂ ಹೆಚ್ಚು ಅಗತ್ಯವಾದುದಾಗಿದೆ. ನಾವು ಸಾಮೂಹಿಕ ಪಾರ್ಟಿಯನ್ನು ಕಟ್ಟುವುದಷ್ಟೇ ಅಲ್ಲ, ಆದರೆ ಸಾಮೂಹಿಕ ಕಮ್ಯೂನಿಸ್ಟ್ ಪಾರ್ಟಿಯನ್ನು, ಕಾರ್ಮಿಕ ವರ್ಗದ ಸಾಮೂಹಿಕ ಪಾರ್ಟಿಯನ್ನು, ದೃಢವಾದ ಸೈದ್ಧಾಂತಿಕ ಆಧಾರದ ಮೇಲೆ, ಶ್ರಮಜೀವಿ ಅಂತರರಾಷ್ಟ್ರೀಯತೆಯ ಭಾವನೆಯಲ್ಲಿ ಮತ್ತು ಮಾರ್ಕ್ಸ್‌ವಾದ—ಲೆನಿನ್‌ವಾದದ ತತ್ವಗಳಿಗೆ ಅನುಗುಣವಾಗಿ ಪಾರ್ಟಿಯನ್ನು ಕಟ್ಟಬೇಕಾಗಿದೆ.

ವರದಿಗಳ ಅಭಾವದಿಂದಾಗಿ ಕೇಂದ್ರ ಸಮಿತಿಯು ಈ ವಿಷಯಗಳನು ಪೂರ್ಣವಾಗಿ ವಿವರವಾಗಿ ಚರ್ಚಿಸಲಾಗಲಿಲ್ಲ. ಪಾರ್ಟಿಯ ವಿಶೇಷ ಅಧಿವೇಶನಕ್ಕೆ ಮುನ್ನ ಜರಗುವ ಪ್ರಾಂತ ಸಮ್ಮೇಳನಗಳು ಇದನ್ನು ಚರ್ಚಿಸಬೇಕೆಂದು ಕೇಂದ್ರ ಸಮಿತಿಯು ಭಾವಿಸುತ್ತದೆ. ಸಮ್ಮೇಳನ ಚರ್ಚಿಸಲು ಕೆಲವು ಮುಖ್ಯ ವಿಷಯಗಳನ್ನು ನಾವು ಸೂಚಿಸಲು ಬಯಸುತ್ತೇವೆ.

1. **ಶಿಸ್ತನ್ನು** ಪುನಃ ಸ್ಥಾಪಿಸುವುದು ಅಗತ್ಯವಾದ ಜರೂರು ಕಾರ್ಯವಾಗಿದೆ. ಇದನ್ನು ಪ್ರಾಥಮಿಕವಾಗಿ ಮತ್ತು ಮುಖ್ಯವಾಗಿ ಮೇಲಿನ ಸಮಿತಿಗಳು ಮಾಡಬೇಕು— ಕೇಂದ್ರ ಸಮಿತಿ ಮತ್ತು ಪ್ರಾಂತಸಮಿತಿಗಳು ಆರಂಭಿಸಬೇಕು —ಮುಖ್ಯ ಅವುಗಳ ಸದಸ್ಯರು ಶಿಸ್ತಿನಿಂದ ಕೆಲಸ ಮಾ...

(೯ನೇ ಪುಟ ನೋಡಿ)

# ಭೂರಹಿತರನ್ನು ವಂಚಿಸಿ ಮಠಾಧಿಪತಿಗೆ ಸರಕಾರಿ ಭೂಮಿ ದಾನ

ತುಮಕೂರು ಜಿಲ್ಲೆಯಲ್ಲಿ ಸ್ಟೇಟ್ ಫಾರೆಸ್ಟ್‌ಗೆ ಸೇರಿದ ಕುಂಬಾರಹಳ್ಳಿ ಕೆರೆಯ ಮೈದಾನದಲ್ಲಿ ಫಲವತ್ತಾದ 50 ಎಕರೆ ಜಮೀನನ್ನು ಮಾಜಿ ಮುನಿಸಿಪಲ್ ಪ್ರೆಸಿಡೆಂಟರೂ ಮತ್ತು ಪ್ರಮುಖ ಕಂಟ್ರಾಕ್ಟ್‌ದಾರರೂ ಆದ ಪುಟ್ಟಗಂಗಯ್ಯನವರಿಗೆ ಕೊಡಲಾಗಿದೆ ಅಲ್ಲದೆ ಸದರೀ ಸ್ಟೇಟ್ ಫಾರೆಸ್ಟ್‌ಗೆ ಸೇರಿದ ಪಂಡಿತನಹಳ್ಳಿ ಪ್ಲಾಂಟೇಷನ್ ಎಂಬಲ್ಲಿ ಸಿದ್ದಗಂಗಾ ಕ್ಷೇತ್ರದ ಮಠಾಧೀಶ್ವರರಿಗೆ 100 ಎಕರೆ ಜಮೀನನ್ನು ಉಚಿತವಾಗಿ ಸರ್ಕಾರದಿಂದ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಹಿಂದೆ ಹತ್ತಾರು ವರ್ಷಗಳಿಂದ ಸದರೀ ಜಾಗದ ಅಕ್ಕಪಕ್ಕದ ಹಳ್ಳಿಗಳ ಅಂದರೆ ಮಾರನಾಯ್ಕನಪಾಳ್ಯ, ಕ್ಯಾತ್ಸಂದ್ರ, ದೇವರಾಯಪಟ್ಟಣ, ದುರ್ಗದಹಳ್ಳಿ ಮತ್ತು ತುಮಕೂರು - ಇಲ್ಲಿಯ ಜಮೀನಿಲ್ಲದ ರೈತರುಗಳು ಮತ್ತು ಹರಿಜನರು ಒಂದೇ ಸಮನೇ ಈ ಭೂಮಿಯನ್ನು ಕೇಳುತ್ತ ಬಂದಿದ್ದರು. ಈ ಜಮೀನನ್ನು ಹರಿಜನರಿಗೆ ಕೊಡುವಂತೆ ಹಿಂದೆ ಮಂತ್ರಿಗಳಾಗಿದ್ದ ಎಂ. ವಿ. ರಾಮರಾಯರೂ ಸಹ ಶಿಪಾರಸ್ಸು ಮಾಡಿದ್ದಾರೆಂದು ತಿಳಿದು ಬಂದಿದೆ; ಆಗ್ಗೆ ಅರಣ್ಯ ಇಲಾಖೆಯವರು ಸದರೀ ಜಮೀನು ವನ್ಯಾಭಿವೃದ್ಧಿಗೆ ಮೂಲವಾದ ತಾಯಿವ ಗಿಡ ಆ ಜಾಗದಲ್ಲಿರುವುದರಿಂದ ಮತ್ತು ಸ್ಟೇಟ್ ಫಾರೆಸ್ಟ್‌ಗೆ ಸೇರಿದ ಜಮೀನು ತುಮಕೂರು ಜಿಲ್ಲೆಯಲ್ಲಿ ಕಮ್ಮಿಯಿರುವುದರಿಂದಲೂ ಸದರಿ ಜಮೀನನ್ನು ಕೊಡಲು ಸಾಧ್ಯವಿಲ್ಲವೆಂದು ಹಿಂದಿನಿಂದಲೂ ಕಾರಣವನ್ನು ಕೊಡುತ್ತಾ ಬಂದಿದ್ದಾರೆ. ಆದರೆ ವ್ಯವಸಾಯಗಾರರಲ್ಲದವರೂ, ಹೆಚ್ಚು ಜಮೀನುಳ್ಳವರೂ ಆದ ಮೇಲ್ಕಂಡವರುಗಳಿಗೆ ಉಚಿತವಾಗಿ ಭೂಮಿ ಕೊಟ್ಟು ಸರ್ಕಾರ ಯಾರ ಕಡೆಯಿದೆಯೆಂಬುದನ್ನು ತೋರಿಸಿಕೊಟ್ಟಿದೆ. ಈ ಜಮೀನನ್ನು ಪಡೆಯಲು ಮೇಲ್ಕಂಡವರುಗಳು ನೇರವಾಗಿ ಅರಣ್ಯ ಇಲಾಖೆಯ ಮಂತ್ರಿಗಳಿಂದಲೇ ಮಂಜೂರು ಮಾಡಿಸಿಕೊಂಡು ಬಂದಿರುವರೆಂದೂ ಸಹ ಬಲವಾದ ವೃತ್ತಗಳಿಂದ ತಿಳಿದು ಬಂದಿದೆ. ಉಳುವವನಿಗೆ ಭೂಮಿಯೆಂದು ದೊಡ್ಡ ದೊಡ್ಡ ಭಾಷಣಗಳನ್ನು ಕುಟ್ಟುತ್ತಿರುವ ಕಾಂಗ್ರೆಸ್ ಮಂತ್ರಿಗಳು ಈ ರೀತಿಯಾಗಿ ತಮಗೆ ಬೇಕಾದ ಜಮೀನುದಾರರುಗಳಿಗೆ ಇನ್ನೂ ಹೆಚ್ಚು ಭೂಮಿಯನ್ನು ಕೊಟ್ಟು ಪ್ರೋತ್ಸಾಹಿಸುತ್ತಿರುವುದಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿದೆ. ತುಮಕೂರು ಕ್ಷೇತ್ರದಿಂದ ಚುನಾಯಿತರಾಗಿರುವ ವಿಧಾನ ಸಭಾ ಸದಸ್ಯರು ಇದರವಿರುದ್ಧ ಹೋರಾಡಲು ಸಿದ್ಧರಿದ್ದಾರೆಯೇ ?

ಪ್ರತಿಯೊಬ್ಬಪ್ರಜೆಯೂ ಈ ಅನ್ಯಾಯವನ್ನು ಖಂಡಿಸಿ ಮೇಲ್ಕಂಡ ಜಮೀನಿಲ್ಲದ ರೈತರಿಗೆ ಹಂಚುವಂತೆ ಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ಕೋರುತ್ತೇವೆ. ರೈತರೆಲ್ಲರೂ ಈ ಅನ್ಯಾಯವನ್ನು ಪ್ರತಿಭಟಿಸಬೇಕೆಂದು ತುಮಕೂರು ತಾಲ್ಲೋಕಿನ ರೈತಸಂಘ ಕರೆಯೀಯುತ್ತದೆ.

### ಗ್ರಾಮಸ್ಥರಿಗೆ ಹಂಚಬೇಕಾದ ಗೋಧಿ, ಹಾಲು, ತುಪ್ಪ ಯಾರ ಮನೆ ಕಂಡಿದೆ ?

ತುಮಕೂರಿಗೆ 2 ಮೈಲಿ ದೂರದಲ್ಲಿರುವ ಶೆಟ್ಟಿಹಳ್ಳಿಯಲ್ಲಿ ಗ್ರಾಮದ ಪಂಚಾಯಿತಿಯ ಅಧ್ಯಕ್ಷರು ಬಡವರಿಗೆ ಹಂಚಲೆಂದು ಹಾಲಿನ ಪುಡಿ, ಗೋಧಿ, ಮತ್ತು ತುಪ್ಪವನ್ನು ಸರ್ಕಾರದಿಂದ ಮುಫತ್ತಾಗಿ ಹಂಚುವುದಕೋಸ್ಕರ ತಂದು 7-8 ತಿಂಗಳಾದರೂ ಹಂಚದೇ ಕಾಲಕಳೆಯುತ್ತಿದ್ದರು. ಕೆಲವು ಗ್ರಾಮಸ್ಥರುಗಳು ಹಂಚದೇ ಇರುವುದರ ಬಗ್ಗೆ ಅನುಮಾನವಾಗಿ ತಾಲ್ಲೂಕು ಅಮಲ್ದಾರ್‌ರವರ ಬಳಿ ನಿಯೋಗ ಹೋಗಿ ತನಿಖೆ ನಡೆಸಲು ಕ್ರಮತೆಗೆದು ಕೊಳ್ಳಬೇಕೆಂದು ಮನವಿಯನ್ನು ಕೊಟ್ಟಿದ್ದರು. ಅಮಲ್ದಾರ್‌ರವರು ತಾವೇ ಖುದ್ದಾಗಿ ಹಂಚಿಸುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದರು. ಆದರೆ ಇದುವರೆಗೂ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳದೇ ಮೇಲಾಧಿಕಾರಿಗಳು ಸುಮ್ಮನಿದ್ದಾರೆ. ಇದರಿಂದಾಗಿ ಅಧಿಕಾರಿಗಳ ಮೇಲೆ ಅನುಮಾನವಾಗದೆ? ಈ ಅಮಲ್ದಾರ್‌ರವರು ಈಗಲಾದರೂ ಇದರ ಬಗ್ಗೆ ಆದಷ್ಟು ಜಾಗ್ರತೆ ತನಿಖೆ ನಡೆಯಿಸಿ ಗ್ರಾಮದಲ್ಲಿ ಉಚಿತವಾಗಿತುಪ್ಪ, ಹಾಲು ಮತ್ತು ಗೋಧಿಯನ್ನು ಹಂಚುತ್ತಾರೆಂದು ನಂಬಿರುತ್ತೇವೆ.

# ಪ್ರಾಂತೀಯ ಸುದ್ದಿ ಸಂಗ್ರಹ

### ಕಮ್ಯೂನಿಸ್ಟ್ ಪಾರ್ಟಿ ಬಹಿರಂಗ ಸಭೆ

ತಾ| 2-12-57 ನೇ ಸಾಯಂಕಾಲ 6 ಘಂಟೆಗೆ ಆಜಾದ್ ಪಾರ್ಕ್‌ನಲ್ಲಿ ಕಮ್ಯೂನಿಸ್ಟ್ ಪಾರ್ಟಿ ಆಶ್ರಯದಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ದಿನಕರ್ ಸಹೂರ್, ಬಿ.ಎ., ಎಲ್.ಎಲ್.ಬಿ., ಅವರು ಅಧ್ಯಕ್ಷತೆ ವಹಿಸಿದ್ದರು. ಚಿಕ್ಕಮಗಳೂರು ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿ ಶ್ರೀ ಎಂ. ವಿ. ಭಾಸ್ಕರ್‌ರವರು ಸಭಿಕರನ್ನು ಸ್ವಾಗತಿಸಿದ ಬಳಿಕ ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿ ಸಮಿತಿಯ ಸದಸ್ಯ ಶ್ರೀ ಬಿ. ವಿ. ಕಕ್ಕಿಲ್ಲಾಯರು ಇಂದಿನ ರಾಜಕೀಯ ಪರಿಸ್ಥಿತಿ, ಆಹಾರದ ಸಮಸ್ಯೆ, ದ್ವಿತೀಯ ಪಂಚವಾರ್ಷಿಕ ಯೋಜನೆ, ಭೂಸುಧಾರಣೆ ಮುಂತಾದವುಗಳನ್ನು ವಿವರಿಸಿದರು. ಕಮ್ಯೂನಿಸ್ಟ್ ಪಾರ್ಟಿಯ ಧೋರಣೆ ಹಾಗು ಕೇರಳ ಸರಕಾರವು ನೆರವೇರಿಸಿರುವ ಕಾರ್ಯಗಳ ಕುರಿತು ಮಾತನಾಡಿದರು. ದೇಶದ ಅಭಿವೃದ್ಧಿ ಮತ್ತು ಜನತೆಯ ಏಳಿಗೆ ಸಾಧಿಸುವ ಮಹತ್ಕಾರ್ಯದಲ್ಲಿ ಸ್ಪರ್ಧೆಯ ದೃಷ್ಟಿಯಿಟ್ಟು ದುಡಿಯೋಣವೆಂದು ಆಹ್ವಾನವಿತ್ತರು. ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

### ಭದ್ರಾವತಿಯಲ್ಲಿ ೫ ಕಳ್ಳಭಟ್ಟಿ ಕೇಂದ್ರಗಳ ಧಾಳಿ

'ಜನಶಕ್ತಿ'ಯ 1—9—1957 ನೇ ಸಂಚಿಕೆಯಲ್ಲಿ 'ಕಳ್ಳಭಟ್ಟಿ ಸಾರಾಯಿ ಒಂದು ಗುಡಿ ಕೈಗಾರಿಕೆಯೆ ?' ಎಂಬ ಶೀರ್ಷಿಕೆಯಡಿಯಲ್ಲಿ, ಭದ್ರಾವತಿಯಲ್ಲಿ ಅನಿರ್ಬಂಧವಾಗಿ, ಪೋಲೀಸರ ಮೂಗಿನಡಿಯಲ್ಲೇ ಸಾರಾಯಿ ತಯಾರಿ ಹಾಗೂ ಮಾರಾಟ ನಡೆಯುತ್ತಿದ್ದುದನ್ನು, ಪೋಲೀಸರೇ ಇದಕ್ಕೆ ಪರೋಕ್ಷವಾದ ಬೆಂಬಲವೀಯುತ್ತಿದ್ದರೆಂಬುದನ್ನು ಕುರಿತು ಲೇಖನವೊಂದನ್ನು ಬರೆಯಲಾಗಿತ್ತು. 'ಜನಶಕ್ತಿ' ಲೇಖನ ವ್ಯರ್ಥವಾಗಲಿಲ್ಲ ಈಗ ಭದ್ರಾವತಿ ಯೋಜನೆಯ ದಟ್ಟವಾದ ಕಾಡಿನಲ್ಲಿ, ಕಳ್ಳಭಟ್ಟಿ ಸಾರಾಯಿ ತಯಾರಕರ ಟೋಳಿಯೊಂದರ ದಸ್ತಗಿರಿಯಾಗಿದೆ. 5 ಕಳ್ಳಭಟ್ಟಿ ಕೇಂದ್ರಗಳಿಗೆ ಪೋಲೀಸರು ಧಾಳಿ ನಡೆಸಿ ಅವುಗಳನ್ನು ವಶಪಡಿಸಿಕೊಂಡಿದ್ದಾರೆ.

ಶಿವಮೊಗ್ಗೆಯ ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀ. ಕೆ. ವಿ. ಕುಮಾರಸ್ವಾಮಿಯವರೇ ನೇರವಾಗಿ ಈ ಧಾಳಿಯನ್ನು ನಡೆಸಲು ಮುಂದಾಗಿದ್ದರು. ದಸ್ತಗಿರಿಯಾದ 5 ಮಂದಿಯೂ ಕೋರ್ಟು ವಿಚಾರಣೆಯಲ್ಲಿ ತಪ್ಪಿತಸ್ಥರೆಂದು ತಪ್ಪೊಪ್ಪಿ ಒಂದು ವರ್ಷದ ಕಠಿಣ ಸಜೆಗೊಳಗಾದರು. ಆದರೆ ಈ ಅಪರಾಧಿಗಳ ಹೇಳಿಕೆ ಪ್ರಕಾರ ಇವರು ಬರೇ ಕೂಲಿಗಾಗಿ ಕೆಲಸ ಮಾಡುವರೆಂದೂ, ಅವರು ಮಾಲಿಕ ಭದ್ರಾ ಯೋಜನೆಯ ಸೈಯದ್ ಅಲಿಯವರಂಥ ಶ್ರೀಮಂತ ವ್ಯಾಪಾರಿಗಳಡಿಯಲ್ಲಿ ದುಡಿಯುವವರೆಂದೂ ಹೇಳಿಕೆ ಇತ್ತಿದ್ದಾರೆ. ಈ ಸೈಯದ್ ಆಲಿ ತಪ್ಪಿಸಿಕೊಂಡಿದ್ದಾರೆ.

**ಪೋಲೀಸರು ಎಚ್ಚೆತ್ತರು !**

ಪೋಲೀಸರು ಬರೇ ಇಷ್ಟರಲ್ಲೇ ತೃಪ್ತಿಪಡದೆ, ಈ ಕಳ್ಳಭಟ್ಟಿಯ ನಿಜವಾದ ಮಾಲಿಕರನ್ನು ದಸ್ತಗಿರಿ ಮಾಡಿ, ಯೋಗ್ಯ ಕಾರ್ಯ ನಿರ್ವಹಣೆ ಮಾಡಬೇಕೆಂದೂ, ಮಾಡುವರೆಂದೂ ನಾವು ನಂಬುತ್ತೇವೆ. ಭದ್ರಾವತಿಯಲ್ಲಿ ಪೋಲೀಸ್ ಉನ್ನತಾಧಿಕಾರಿಗಳೇ ಮುಂದಾಗಿ ನಡೆಸಿದ ಕಳ್ಳಭಟ್ಟಿ ಕೇಂದ್ರ ಧಾಳಿಯಲ್ಲಿ ಇದು ಮೊದಲನೆಯದು, ಮತ್ತು ಈ ಸಂಬಂಧದಲ್ಲಿ ಕಠಿಣವಾದ ಸಜೆಯನ್ನು ಕೋರ್ಟು ಇತ್ತುದರಲ್ಲೂ ಇದು ಪ್ರಥಮ ನಿದರ್ಶನವೆಂದು ತಿಳಿದು ಬಂದಿದೆ. ಪೋಲೀಸರು ಕರ್ತವ್ಯ ನಿರ್ವಹಣೆಯ ಈ ಉತ್ತಮ ಮಟ್ಟವನ್ನು ಇಟ್ಟುಕೊಂಡು ಈ ದಿಶೆಯಲ್ಲಿ ಮುಂದುವರಿದೇ ಆದಲ್ಲಿ, ಭದ್ರಾವತಿಯ ಜನತೆ ತಮ್ಮ ಸಂಪೂರ್ಣ ಸಹಕಾರ ಅವರಿಗೀಯುವರೆಂದು

(೯ನೇ ಪುಟ ನೋಡಿ)

ರೈತ ಸಮ್ಮೇಳನದ ನಿರ್ಣಯಗಳು

### ಟ್ರಾಕ್ಟರುಗಳ ಬಗ್ಗೆ

ವ್ಯವಸಾಯವನ್ನು ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಳಿಸುವುದಾಗಿ ತಿಳಿಸುತ್ತಿರುವ ಸರ್ಕಾರ ವ್ಯವಸಾಯ ಇಲಾಖೆಯ ಮೂಲಕ ಬಾಡಿಗೆಗೆ ಕೊಡಲು ಇಟ್ಟಿದ್ದ ಟ್ರಾಕ್ಟರುಗಳನ್ನು ಖಾಸಗಿಯವರಿಗೆ, ರೈತರು ಟ್ರಾಕ್ಟರುಗಳನ್ನು ಉಪಯೋಗಿಸುತ್ತಿಲ್ಲವೆಂಬ ನೆಪದ ಮೇಲೆ, ಮಾರಲು ಪ್ರಯತ್ನಿಸುತ್ತಿರುವ ನೀತಿಯನ್ನು ಈ ಸಮ್ಮೇಳನವು ಖಂಡಿತ್ತದೆ1 947ರಲ್ಲಿ ಒಂದು ಎಕರೆ ಉಳುವದಕ್ಕೆ ಕೊಡಬೇಕಾಗಿದ್ದ ಬಾಡಿಗೆಯನ್ನು 4 ರೂಪಾಯಿಗಳಿಂದ ಈಗ 25 ರೂಪಾಯಿಗಳಿಗೆ ಏರಿಸಿರುವುದರಿಂದ ರೈತರು ಟ್ರಾಕ್ಟರುಗಳನ್ನು ಉಪಯೊಗಿಸಲು ಸಾಧ್ಯವಿಲ್ಲವಾಗಿದೆ. ಆದುದರಿಂದ ಸರ್ಕಾರದವರು ಟ್ರಾಕ್ಟರ್ ಬಾಡಿಗೆ ದರವನ್ನು ಕಡಿಮೆ ಮಾಡಬೇಕೆಂದು ಮತ್ತು ಟ್ರಾಕ್ಟರ್‌ಗಳನ್ನು ಖಾಸಗಿಯವರಿಗೆ ಮಾರಬಾರದೆಂದು ಈ ಸಮ್ಮೇಳನವು ಸರ್ಕಾರವನ್ನು ಒತ್ತಾಯಪಡಿಸುತ್ತದೆ. ಹಾಗೆಯೇ ಬುಲ್‌ಡೋಸರುಗಳ ಬಾಡಿಗೆಯನ್ನೂ ಈಗಿನ ಅತ್ಯಧಿಕ ದರದಿಂದ ಕಡಿಮೆ ಮಾಡಬೇಕೆಂದು ಈ ಸಮ್ಮೇಳನವು ಸರಕಾರವನ್ನು ಕೇಳಿಕೊಳ್ಳುತ್ತದೆ.

### ಆಹಾರ ಪರಿಸ್ಥಿತಿ ಬಗ್ಗೆ

ಕರ್ನಾಟಕ ಪ್ರಾಂತ ರೈತ ಸಮ್ಮೇಳನವು ಪ್ರಾಂತದ ಆಹಾರ ಪರಿಸ್ಥಿತಿ ಬಗ್ಗೆ ತೀವ್ರ ಕಳವಳ ವ್ಯಕ್ತ ಪಡಿಸುತ್ತದೆ. ಪ್ರಾಂತದ ಹಲವು ಭಾಗಗಳಲ್ಲಿ ಅಭಾವ ಪರಿಸ್ಥಿತಿ ಇದ್ದು ಕ್ಷಾಮದ ಭೀತಿ ತಲೆಯೆತ್ತಿದೆ. ಆಹಾರ ಧಾನ್ಯಗಳ ಬೆಲೆ ಮಿತಿಮೀರಿ ಏರಿದೆ. ಇದರ ಪರಿಣಾಮವಾಗಿ ಕೃಷಿ ಕೆಲಸಗಾರರ ಬಡ ಮತ್ತು ಮಧ್ಯಮ ರೈತರ, ಕಾರ್ಮಿಕರ ಹಾಗೂ ಮಧ್ಯಮ ತರಗತಿಯವರ ಪರಿಸ್ಥಿತಿ ಚಿಂತಾಜನಕವಾಗಿದೆ.

ಈ ಪರಿಸ್ಥಿತಿಗೆ ಸರಕಾರದ ಧೋರಣೆಯೇ ಜವಾಬ್ದಾರಿಯೆಂದು ಈ ಸಮ್ಮೇಳನ ಅಭಿಪ್ರಾಯ ಪಡುತ್ತದೆಂದು ಹೇಳಿ, ನಿರ್ಣಯದಲ್ಲಿ ಕೆಲವು ಸಲಹೆಗಳನ್ನು ಕೊಡಲಾಗಿದೆ, 1) ಅಭಾವ ಪರಿಸ್ಥಿತಿ ಇದ್ದ ಕಡೆ ಕಂದಾಯ, ಸಾಲ, ತೆರಿಗೆ ವಸೂಲಿ ಮುಂತಾದುವನ್ನು ತಡೆಹಿಡಿಯ ಬೇಕು. ಮತ್ತು ಹಿಂದಿನ ವರ್ಷಗಳಲ್ಲೂ ಬೆಳೆಕೆಟ್ಟಿರುವ ಪ್ರದೇಶಗಳಲ್ಲಿ ಹಿಂದಿನ ಕಂದಾಯ ಬಾಕಿಯನ್ನೆಲ್ಲಾ ರದ್ದುಗೊಳಿಸಬೇಕು. ಎಲ್ಲಾ ಬಾಕಿಗೆ ಡಿಕ್ರಿ ಪಡೆದು ಜಪ್ತಿ ಮಾಡಿಸುವುದನ್ನು ಕೂಡಲೇ ನಿಲ್ಲಿಸಬೇಕು. 2) ಎಲ್ಲ ಕಡೆಗಳಲ್ಲೂ ಮತ್ತು ಘಟ್ಟಗಳಲ್ಲೂ ಜನತಾ ಆಹಾರ ಸಮಿತಿಗಳನ್ನು ರಚಿಸಬೇಕು 3) ಬೀಜ, ಗೊಬ್ಬರ ಇತ್ಯಾದಿಗಳನ್ನು ರೈತರಿಗೆ ಸುಲಭ ದರದಲ್ಲಿ ಒದಗಿಸಲು ಐದಾರು ಗ್ರಾಮಗಳಿಗೊಂದರಂತೆ ಕೇಂದ್ರಗಳನ್ನು ತೆರೆಯಬೇಕು. 4) ಸರ್ವಪಕ್ಷ ಸಮ್ಮೇಳನವನ್ನು ಕರೆದು ಈ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು, ಇತ್ಯಾದಿ......

# ಪರಿವರ್ತನೆ!

ಮೂಲ :
**ನಾರಾಯಣ ಗಂಗೋಪಾಧ್ಯಾಯ**
ಅನುವಾದ : "ಶ್ರಮಜೀವಿ"

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಹೆಂಗಸು !

ಬುಲಾಕಿಗೆ ಸಂದೇಹವಾಯಿತು. ಆತನ ಸ್ನಾಯುಗಳು ಒಂದು ಬಾರಿ ಬಿಗಿದುವು. ಈಕೆ ಆತ್ಮಹತ್ಯೆ ಮಾಡಿಕೊಳ್ಳಲು ಹೋಗುವುದಿಲ್ಲ ತಾನೆ? ತನ್ನಲ್ಲೇ ಹೇಳಿಕೊಂಡ. ಈ ಅಂಧಕಾರ ಮಯುನಿಶೆಯಲ್ಲಿ ಗಂಗಾ ನದಿಯ ದಡದಲ್ಲಿ ಹೆಂಗಸೊಬ್ಬಳು ಒಬ್ಬಂಟಿಯಾಗಿ ಬರುವುದಕ್ಕೆ ಬೇರೆ ಅರ್ಥವಾದರೂ ಏನು ?

ತನ್ನ ಮರದ ಕಾಲನ್ನು ಎಳೆದು ಎದ್ದು ನಿಂತು ಕೇಳಿದ :

— ಯಾರು ?

ಹೆಂಗಸು ಬೆಚ್ಚಿ ಸ್ತಬ್ಧಳಾಗಿ ನಿಂತಳು.

ಉತ್ತರ ಬರಲಿಲ್ಲ. ಹೆಂಗಸು ಕಲ್ಲಿನ ಮೂರ್ತಿಯಂತೆ ನಿಂತಿದ್ದಳು.

ಬುಲಾಕಿ ಹತ್ತಿರ ಸರಿದು ನೋಡಿದ, ಆಕೆ ಥರ ಥರ ನಡುಗುತ್ತಿದ್ದಳು.

ರಸ್ತೆಗೆ ಅಡ್ಡವಾಗಿ ನಿಂತು ಬುಲಾಕಿ ಕೇಳಿದ :

— ಯಾರು ನೀನು ಇಲ್ಲಿಗೇಕೆ ಬಂದಿದ್ದಿ ?

ಆಕೆ ಅಳತೊಡಗಿದಳು. ತಡೆ ತಡೆದು ನಡುಗುವ ಧ್ವನಿಯಲ್ಲಿ ಹೇಳಿದಳು — ನನ್ನನ್ನು ಬಿಟ್ಟು ಬಿಡಿ ! ದಮ್ಮಯ್ಯ. ನನ್ನನ್ನು ಬಿಟ್ಟುಬಿಡಿ. ಪೋಲೀಸರ ಕೈಗೆ ಕೊಡಬೇಡಿ !

ಬುಲಾಕಿ ಒಂದು ಬಾರಿ ಸ್ನೇಹದ ನಗು ನಕ್ಕ. ಇದ್ದಕ್ಕಿದ್ದಂತೆಯೇ ಆತನ ಹೃದಯ ಕರುಣಾದ್ರವಾಯಿತು, ಕೊಲೆ, ಗೂಂಡಾಗಿರಿ, ಕೊಳ್ಳೆ ಎಲ್ಲವನ್ನೂ ಬಿಟ್ಟು ಈಗಿಂದೀಗ ಒಂದು ಒಳ್ಳೆಯ ಕಾರ್ಯ ಮಾಡಲು ಆತನ ಮನಸ್ಸು ಅದೇಕೋ ತಡವರಿಸಿತು. ತನ್ನ ಜೀವನದಲ್ಲಿ ಇದುವರೆಗೆ ಮಾಡಲಾದಂತಹ ಕಾರ್ಯವನ್ನು, ಮಾಡಲು ಅವಕಾಶ ದೊರೆತಿರದಂತಹ ಕಾರ್ಯವನ್ನು ಮಾಡಲು ಆತನ ಅಂತರಾತ್ಮ ಪ್ರೇರೇಪಿಸುತ್ತಿತ್ತು. ಬುಲಾಕಿ ಉತ್ತೇಜಿತನಾದ.

— ಇಲ್ಲ, ಇಲ್ಲ, ನೀನು ಹೆದರಬೇಡ. ನಾನು ಪೋಲೀಸನಲ್ಲ.

ಜೇಬಿನಲ್ಲಿ ಬೀಡಿ ಇರಲಿಲ್ಲ. ಬೆಂಕಿಪೆಟ್ಟಿಗೆ ಇತ್ತು. ಕಡ್ಡಿ ಗೀಚಿ ನೋಡಿದ, ಸುಮಾರು ಇಪ್ಪತ್ತು-ಇಪ್ಪತ್ತೈದು ವಯಸ್ಸಿನ ತರುಣಿ ! ಉಚ್ಚ ಮನೆತನದವಳಂತೆ ಕಾಣುತ್ತಿದ್ದಳು;ಮೈ ತುಂಬಾ ಆಭರಣಗಳಿದ್ದುವು. ಬಿಳಿ ಬಟ್ಟೆಯೊಂದರಲ್ಲಿ ಏನನ್ನೋ ಸುತ್ತಿ, ಎದೆಗಪ್ಪಿಕೊಂಡಿದ್ದಳು. ಬುಲಾಕಿಯ ದೃಷ್ಟಿ ಆಕೆಯ ಕತ್ತಿನಲ್ಲಿದ್ದ ಚಿನ್ನದ ಸರದ ಮೇಲೆ ನಿಂತಿತು. ಆದರೆ ಅದಿ ಕ್ಷಣ ಕಾಲ ಮಾತ್ರ. ಹೆಚ್ಚುಹೊತ್ತು ನೋಡಲಾಗಲಿಲ್ಲ. ಕಡ್ಡಿ ಆರಿಹೋಯಿತು. ಬುಲಾಕಿಗೆ ಮನದ ಆಳದಲ್ಲೆಲ್ಲೋ, ಯಾರೋ ಉಸುರಿದಂತಾಯಿತು; ಮೆಹರ್ ಜಾನ್! ಹಣಕ್ಕಾಗಿ ಆಕೆ ಕಷ್ಟಪಡುತ್ತಿದ್ದಾಳೆ. ಆಭರಣಗಳಿಂದ ಭೂಷಿತಳಾದ ಯುವತಿಯೊಬ್ಬಳು........ಒಬ್ಬಳೇ ಒಬ್ಬಳು........ಗಂಗಾ ತಟದಲ್ಲಿ, ಅಂಧಕಾರದಲ್ಲಿ ನಿಂತಿದ್ದಾಳೆ! ಕೇವಲ ಒಂದೇ ಒಂದು ಬಾರಿ ತನ್ನ ಬಲವಾದಉಕ್ಕಿನಎರಡು ತೋಳುಗಳನ್ನು ಮುಂದೆ ಮಾಡಿದರೆ ಸಾಕು.........
ಇಲ್ಲ, ಇಲ್ಲ ! ಇಂದು ದುರ್ಲಭ್ಯ ಅವಕಾಶವೊಂದು ದೊರೆತಿದೆ, ದುರ್ಲಭ್ಯ ಅವಕಾಶ ! ಜೀವನದಲ್ಲೇ ಪ್ರಥಮ ಬಾರಿ ! ಇಂದು ಆತ ತನ್ನ ಲೋಭದ ಮೇಲೆ ವಿಜಯವನ್ನು ಸಾಧಿಸಿ, ಈ ಯುವತಿಯನ್ನು ಕಾಪಾಡಲು ತೀರ್ಮಾನಿಸಿದ್ದಾನೆ ! ಒಂದು ಅಮೂಲ್ಯ ಜೀವನದ ರಕ್ಷಣೆ ಮಾಡಲು ಸಿದ್ಧನಾಗಿದ್ದಾನೆ !

ಹೇಳಿದ ;

— ಬಟ್ಟೆ ಗಂಟಿನಲ್ಲೇನಿದೆ ತಾಯಿ ?

ಬುಲಾಕಿಯ ಧ್ವನಿಯಲ್ಲಿದ್ದ ಅನುಕಂಪದಿಂದ ಆಕೆಗೆ ಸ್ವಲ್ಪ ಸಮಾಧಾನವಾದಂತೆ ಕಂಡಿತು. ಕಡ್ಡಿ ಬೆಳಕಿನಲ್ಲಿ ಆಕೆ ಬುಲಾಕಿಯನ್ನು ನೋಡಿದ್ದಳು ಪೋಲೀಸರ ಕಡೆಯವನಲ್ಲವೆಂದು ಧೈರ್ಯವಾಗಿತ್ತು. ಕಂಪಿತ ಧ್ವನಿಯಲ್ಲಿ ಹೇಳಿದಳು,

ನನ್ನ ನನ್ನ, ಮಗು !

— ಬರೀ ಹಸುಗೂಸು ! ಇದನ್ನು ಜೋಕೆಯಲ್ಲಿ ಹೊತ್ತುಕೊಂಡು ಆತ್ಮಹತ್ಯೆ ಮಾಡಲು ಬಂದಿದ್ದಿಯೇನು ?

ಆಕೆ ಏನೂ ಹೇಳಲಿಲ್ಲ. ಅಳುತ್ತಿದ್ದಳು ಅಷ್ಟೆ.

ಬುಲಾಕಿ ಹೇಳಿದ;

— ಛೀ:, ತಾಯಿ ! ಆತ್ಮಹತ್ಯೆ ಯಾತಕ್ಕಾಗಿ ಮಾಡಿಕೊಳ್ಳುತ್ತಿ ? ಇದಕ್ಕಿಂತ ದೊಡ್ಡ ಪಾಪ ಬೇರೆ ಇದೆಯೆ ? ಗಂಗೆಯಲ್ಲಿ ಮುಳುಗಿ ಸತ್ತರೂ ಮುಕ್ತಿ ದೊರೆಯದು. ಆತ್ಮಹತ್ಯೆ ಹೇಡಿಗಳ ಕೆಲಸ.

ತಾನು ಇಷ್ಟು ಮಾತನಾಡಿದ್ದು ಆತನಿಗೇ ಆಶ್ಚರ್ಯವಾಯಿತು. ಮನದಲ್ಲೇ ನಕ್ಕ. ಇಂದು ಧರ್ಮದ ಬಗ್ಗೆ ಉಪದೇಶ ಕೊಡುತ್ತಿದ್ದ. ತನ್ನ ಜೀವನದಲ್ಲಿ ಮಾಡಲಾರದ, ಮಾಡದ ನೀಚ ಕಾರ್ಯವೊಂದೂ ಇಲ್ಲ. ಆದರೆ ಇಂದು, ಗಂಗೆಯ ದಡದಲ್ಲಿ, ಕ್ಷಣಕಾಲದಲ್ಲಿ ತಾನು ಪರಿವರ್ತಿತನಾಗಿದ್ದಾನೆ !

ಪುನಃ ಹೇಳಿದ;

— ಕೇಳುತಾಯಿ, ನನ್ನನ್ನು ನಿನ್ನ ಮಗನೆಂದು ತಿಳಿ. ನನ್ನ ಮುಂದೆ ನಾಚಿಕೆ ಬೇಡ. ನಿನಗೇನು ಕಷ್ಟ? ನಿನ್ನ ಗಂಡ ಶರಾಬಿಯೇನು? ತುಂಬಾ ಕಷ್ಟ ಕೊಡುತ್ತಾನೇನು ?

— ಹೂಂ, — ಆಕೆ ಹೇಳಿದಳು.

ಬುಲಾಕಿ ನಕ್ಕ, ಕಷ್ಟ ಅರಿತಿದ್ದ ಅವನಿಗೆ ಆಕೆಯ ಮನಸ್ಸು ಅರಿಯಿತು.

— ಕೇವಲ ಇಷ್ಟಕ್ಕಾಗಿ ಸಾಯಲು ಹೊರಟಿದ್ದಿಯೇನು ? ಛೀ: ಛೀ: ! ತಾಯೇ, ನನ್ನ ಹೆಸರು ಗೊತ್ತೇ? ನಾನು ಬುಲಾಕಿ ರಾಮ. ಕಳ್ಳರ ಪೇಟೆಯ ಪ್ರಸಿದ್ಧ ಗೂಂಡಾ, ದರೋಡೆಕೋರ.

ಹೆಂಗಸು ಅಳತೊಡಗಿದಳು. ಬುಲಾಕಿ ಕರ್ಕಶ ಸ್ವರದಲ್ಲಿ ನಕ್ಕು ನುಡಿದ;

— ಇಲ್ಲ, ಇಲ್ಲ ! ನೀನು ಹೆದರಬೇಡ ! ನಾನು ನಿನ್ನನ್ನು ತಾಯಿಯೆಂದು ಕರೆಯುತ್ತೇನೆ. ನಿನ್ನ ಪತಿಯ ಹೆಸರು ಹೇಳಿದರೆ; ಮುಂದೆ ಆತ ಬದುಕಿರುವ ತನಕ ನಿನ್ನನ್ನು ಮುಟ್ಟಲು ಹೆದರುವಂಥ ಪಾಠ ಕಲಿಸುತ್ತೇನೆ. ನಾನು ಆಣೆ ಇಟ್ಟು ಹೇಳುತ್ತೇನೆ ತಾಯಿ.

ಯುವತಿ ನಡುಗುತ್ತಿದ್ದಳು ಭಯ ಕಂಪಿತ ಸ್ವರದಲ್ಲಿ ಹೇಳಿದಳು.

— ಬಿಡು, ಏನೂ ಬೇಡ.

— ಹುಂ, ಭಯವೇನು ? ನಾನು ಪ್ರಸಿದ್ಧ ಗೂಂಡಾ ! ಕೈಯ ಭರವಸೆಯೇನು ? ಹೊಡೆತಕ್ಕೆ ಆತನ ಅವಸ್ಥೆಯೇ ಮುಗಿದರೆ ? ಇದಲ್ಲವೆ ನಿನ್ನ ಭಯ ?— ಬುಲಾಕಿ ಹಲ್ಲು ಕಿರಿದು ಮುಂದುವರಿಸಿದ— ಪತಿಯ ಮೇಲೆ ಅಷ್ಟು ಮಮತೆ ಇದೆ. ಮತ್ತೆ ಆತನಿಂದಾಗಿಯೇ ಸಾವನ್ನಪ್ಪಲು ಹೋಗುತ್ತಿರುವಿಯಲ್ಲ? ಹೆಂಗಸರೂ ತುಂಬಾ ವಿಚಿತ್ರರು ! — ತನ್ನ ರಸಿಕತೆಗೆ ತಾನೇ ನಕ್ಕ.

ಆಕೆ ಮೌನವಾಗಿದ್ದಳು.

— ಸರಿ, ಹೋಗಲಿ ಬಿಡು. ನೀನೇ ಹೆದರುವಾಗ ನಾನೇನು ಮಾಡಲು ಸಾಧ್ಯ ! ಆದರೆ ನನ್ನ ಗುರುತು— ಪರಿಚಯ ಚೆನ್ನಾಗಿ ಜ್ಞಾಪಕದಲ್ಲಿಡು. ಎಂದಾದರೂ ಕಷ್ಟ ಬಂದರೆ ಮರೆಯಬೇಡ. ಜೈಲಿನಲ್ಲಿರದೆ, ಇನ್ನೆಲ್ಲಿದ್ದರೂ ಬಂದು ಖಂಡಿತಾ ನಿನಗೆ ಸಹಾಯ ಮಾಡುತ್ತೇನೆ.
— ಬುಲಾಕಿ ತನ್ನ ಸ್ಥಳದ ಪರಿಚಯ ಹೇಳಿದ. ನೆನಪಿರುತ್ತಲ್ಲ ತಾಯಿ ? ಮರೆಯುವುದಿಲ್ಲ ತಾನೆ ?

ಬುಲಾಕಿಯ ಧ್ವನಿಯಲ್ಲಿ ವಿಚಿತ್ರ ನೋವಿನ ಕಂಪನವಿತ್ತು. ತನ್ನ ತಾಯಿಯನ್ನು ಬಹಳ ಚಿಕ್ಕ ವಯಸ್ಸಿನಲ್ಲೇ ಕಳೆದುಕೊಂಡಿದ್ದ ಎಷ್ಟು ಪ್ರಯತ್ನ ಪಟ್ಟರೂ ಆಕೆಯ ಮುಖದ ಗುರುತನ್ನು ತನ್ನ ಮನಃ ಪಟಲದ ಮೇಲೆ ತರಲು ಅಸಮರ್ಥನಾಗಿದ್ದ. ಏನೋ ಒಂದು ಬಗೆಯಲ್ಲಿ ಅವನಿಗೆ ಆನಂದವಾಗಿತ್ತು.

ಅವನು ಇಂದು ಶರಾಬು ಕುಡಿದು ಮತ್ತನಾಗಿರಲಿಲ್ಲ. ತುಂಬಾ ಒಳ್ಳೆಯದಾಯಿತು, ಇಲ್ಲದಿದ್ದರೆ ಮತ್ತಿನಲ್ಲಿ ಏನೆಲ್ಲಾ ಆಗುತ್ತಿತ್ತೊ ಯಾರಿಗೆ ಗೊತ್ತು? ಮತ್ತೇರಿರುವಾಗ ಕಡ್ಡಿ ಬೆಳಕಿನಲ್ಲಿ ಆಭರಣಗಳನ್ನು ನೋಡಿ ಸುಮ್ಮನಿರುತ್ತಿದ್ದನೆ? ಒಂದು ಕೊಲೆ ಮಾಡಿ, ಓಡಿಹೋಗಲು ಎಷ್ಟು ಹೊತ್ತು ! ಎದುರಿನಲ್ಲೇ ಗಂಗೆ ಹರಿಯುತ್ತಿತ್ತು. ನಸುಕಿನೊಳಗೆ ಹೆಣ "ಡೈಮಂಡ್ ಹಾರ್ಬರ್" ತಲುಪುತ್ತಿತ್ತು.

ಇಲ್ಲ. ಇಲ್ಲ ! ತಾನು ಇಂದು ಹಾಗೆ ಮಾಡಲು ಸಿದ್ಧನಿಲ್ಲ.

ತನ್ನ ಮೇಲೆ ಏನು ವಿಶ್ವಾಸ? ಆತ ಮುಂದೆ ಕಡ್ಡಿ ಹಚ್ಚಲಿಲ್ಲ. ಹೃದಯದಲ್ಲಿ ಅಡಗಿರುವ ಸೈತಾನನಿಗೆಪ್ರಲೋಭವೀಯಲು ಆತಸಿದ್ಧನಿರಲಿಲ್ಲ. ಇಂದಿನ ರಾತ್ರಿ ಆತನ ಜೀವನದ ಒಂದು ಮಹತ್ವಪೂರ್ಣ ರಾತ್ರಿ! ಈ ಸುಸಮಯ ನಾಳೆ ಬಾರದು. ಮುಂದೆಂದೂ ಬಾರದು. ಜೂಜಿನ ಕಟ್ಟೆಯಲ್ಲಿ, ಶರಾಬಿನ ಹೊಳೆಯಲ್ಲಿ, ಜಗಳ—ಗಲಾಟೆ, ಹೊಡೆತಗಳಲ್ಲಿ, ಮೆಹರ್ ಜಾನಳ ಹಾವಿನ ಆಲಿಂಗನದಲ್ಲಿ ಜೀವನದ ಎಲ್ಲಾ ರಾತ್ರಿ, ಪ್ರತಿಯೊಂದು ರಾತ್ರಿಯೂ ಕಳೆದು ಹೋಗುತ್ತದೆ. ಆ ಮಾದಕತೆಯ ಮಧ್ಯದಲ್ಲಿ ಕ್ಷಣಕಾಲ ಎಚ್ಚರನಾದಾಗ ಆತನಿಗೆ ಇಂದಿನ ರಾತ್ರಿ ಸ್ಮರಣೆಗೆ ಬಂದೇ ಬರುವುದು.

ಬುಲಾಕಿ ಸ್ನೇಹ ಭರಿತ ಸ್ವರದಲ್ಲಿ ಹೇಳಿದ;

— ಮರೆಯುವುದಿಲ್ಲ ತಾನೆ, ತಾಯಿ?

ಹೆಂಗಸು ತಲೆಯಾಡಿಸಿದಳು. ನಡುಗುತ್ತಿದ್ದಳು.

— ಬಾ, ಹೋಗೋಣಾ, ಮನೆಗೆ.

ಆಕೆ ಕದಲಲಿಲ್ಲ.

— ಹೂಂ, ಬಾ.

— ಭಯವೇನು ? ಭಯ ಪಡಬೇಡ. ನಾನೂ ಬರುತ್ತೇನೆ. ನಾನು ಜೊತೆಯಲ್ಲಿರುವಷ್ಟು ಹೊತ್ತು ಯಾರೂ ನಿನ್ನ ಕಡೆ ಮುಖ ತಿರುಗಿಸಿ ಕೂಡಾ ನೋಡರು, ಬಾ. ನಾನು ನಿನ್ನನ್ನು ತಾಯಿಎನ್ನುತ್ತೇನೆ. ಮಗನಿರುವಾಗ ತಾಯಿಗೆ ಹೆದರಿಕೆ ಯಾತರದ್ದು ?

ಹೆಂಗಸು ಪೇಚಿನಲ್ಲಿ ಸಿಕ್ಕಿದ್ದಳು. ಹಿಂದಿರುಗಲು ಆಕೆಯ ಕಾಲುಗಳು ಏಳಲಿಲ್ಲ. ಬುಲಾಕಿಗೆ ಸ್ವಲ್ಪ ನಿರಾಶೆಯಾಯಿತು. ಮತ್ತೆ ಧೈರ್ಯ ಹೇಳಿದ ಆಕೆಗೆ.

ಆದರೆ ಆಕೆ ಶಿಲಾಮೂರ್ತಿಯಂತೆ ಕದಲದೇ ಇದ್ದಳು.

ಬುಲಾಕಿಯ ಮನಸ್ಸು ಸ್ವಲ್ಪ ಕಹಿಯಾಯಿತು. 'ಇಲ್ಲೇ ಸಾಯಿ ನನಗೇನು? ಅನ್ನಬೇಕೆನಿಸಿತು.' ಆದರೆ ಮರುಕ್ಷಣದಲ್ಲೇ ತನ್ನನ್ನು ಸಾವರಿಸಿಕೊಂಡ. ಹಾಗೆ ವರ್ತಿಸಲು ಇಂದಿನ ರಾತ್ರಿ ಮನವೊಪ್ಪಲಿಲ್ಲ.

ಪುನಃ ಹೇಳಿದ ;

— ಬಾ, ಬಾ !

— ಆದರೆ... ... —ಆಕೆ ಹೇಳಿದಳು,

— ಆದರೆ— ಗೀದರೆ ಒಂದೂ ಇಲ್ಲ. ನೀನು ನನ್ನ ಜೊತೆ ಬರಲೇ ಬೇಕು. ಈ ಸ್ಥಿತಿಯಲ್ಲಿ ನಿನ್ನನ್ನು ಬಿಟ್ಟು ಒಂದು ಹೆಜ್ಜೆಯೂ ಹೋಗಲಾರೆ ! — ಬುಲಾಕಿ ಹಟದಿಂದ ಹೇಳಿದ— ಬಾ, ತಾಯಿ ಬಾ, ನಾನು ನಿನ್ನ ಮನೆಯನ್ನು ನೋಡುತ್ತೇನೆ, ನೀನು ಬಾಯಿಂದ ಏನೂ ಉಸುರದಿದ್ದರೂ, ನಾನಂತು ನಿನ್ನ ಕಷ್ಟಗಳನ್ನು ದೂರ ಮಾಡಲು ಪ್ರಯತ್ನಿಸುತ್ತೇನೆ. ನಿರುಪಾಯಳಾಗಿ ಆಕೆ ಅನುಸರಿಸತೊಡಗಿದಳು. ಆಕೆ ಏನು ಯೋಚಿಸುತ್ತಿದ್ದಳೊ ? ಯಾರಿಗೆ ಗೊತ್ತು ? ಬುಲಾಕಿ ಆಕೆಯ ಬಗ್ಗೆ ಯೋಚಿಸುತ್ತಿರಲಿಲ್ಲ. ಆತ ತನ್ನಲ್ಲೇ ತಾನು ಆನಂದತುಂದಿಲನಾಗಿದ್ದ. ಇಂದು ಆತನಿಗೆ ಜೀವಮಾನದಲ್ಲೇ ದೊರೆಯದ ಪವಿತ್ರ ಅವಕಾಶವೊಂದು ದೊರೆತಿದೆ.

ರೈಲ್ವೆ ಲೈನ್ ದಾಟಿದ ನಂತರ ಮುಂದಿನ ಗಲ್ಲಿಯೊಂದರ ಪಕ್ಕದಲ್ಲಿ ಆಕೆ ತಡೆದಳು.

— ಏನು ? ಕಷ್ಟವಾಗುತ್ತೇನು ? ಕೊಡು ತಾಯಿ; ಮಗುವನ್ನು ನಾನು ಹೊತ್ತುಕೊಳ್ಳುತ್ತೇನೆ.

ದೂರದಲ್ಲೊಂದು ದೀಪಕಂಬವಿತ್ತು. ಅದರ ಅಸ್ಪಷ್ಟ ಬೆಳಕಿನಲ್ಲಿ ಆಕೆಯ ಮುಖವನ್ನೊಮ್ಮೆ ವೀಕ್ಷಿಸಿದ. ಆಕೆ ಅಳುತ್ತಿದ್ದಳು.

ಬುಲಾಕಿ ನಕ್ಕ;

— ಹೆದರಬೇಡ ತಾಯಿ, ಗೂಂಡಾನ ಕೈಯಾದರೇನು ? ಮಗುವನ್ನು ಮೃದುವಾಗಿ ಎತ್ತಿಕೊಳ್ಳುತ್ತೇನೆ.

ಆಕೆ ಹತ್ತಿಕ್ಕಿದ ಧ್ವನಿಯಲ್ಲಿ ಹೇಳಿದಳು;

— ಮಲಗಿದೆ.

— ಮಲಗಿರಲಿ ಎಬ್ಬಿಸುವುದಿಲ್ಲ. — ಬುಲಾಕಿಯು ತುಂಬಾ ಎಚ್ಚರಿಕೆಯಿಂದ ಬಟ್ಟೆಯ ಗಂಟನ್ನು ಕೈಗೆತ್ತಿಕೊಂಡ ಒಳಗಿನಿಂದ ಮೃದು ಶಿಶುವಿನ ಸ್ಪರ್ಶದ ಅನುಭವವಾಯಿತು.

ಆಕೆಯ ಅಸ್ಪಷ್ಟ ಸ್ವರವೂ ಕೇಳಿಸಿತು;

— ನನಗೆ ಭಯವಾಗುತ್ತಿದೆ ನಾನು ಮುಂದಿನಿಂದ ಹೋಗಲಾರೆ.

— ಸರಿ, ನಾನು ಮುಂದೆ ಹೋಗುತ್ತೇನೆ. ನನ್ನ ಹಿಂದಿನಿಂದ ಬಾ.

ಬುಲಾಕಿ ಮುಂದುವರಿಯ ತೊಡಗಿದ, ಒಂದರ ಹಿಂದೊಂದು ಗಲ್ಲಿ ದಾಟುತ್ತಿದ್ದ. ಕಗ್ಗತ್ತಲೆಯಿಂದ ತುಂಬಿದ ಗಲ್ಲಿ. ತುಂಬಾ ಪ್ರೇಮದಿಂದ ಆತ ಮಗುವನ್ನು ಎದೆಗಾಣಿಸಿಕೊಂಡಿದ್ದ. ವಿಚಿತ್ರ ಆನಂದವೆನಿಸುತಿತ್ತು. ಜೊತೆಯಲ್ಲೇ ನಗುಬಂತು. ಪ್ರಸಿದ್ಧ ಗೂಂಡಾ ಬುಲಾಕಿರಾಮ, ಇಂದು ಹಸುಗೂಸೊಂದನ್ನು ಹೊತ್ತುಕೊಂಡು ಆನಂದದಿಂದ ನಡೆಯುತ್ತಿದ್ದಾನೆ! ಗುಂಪಿನವರು ತಿಳಿದರೆ ಏನನ್ನಲಿಕ್ಕಿಲ್ಲ ? ...........

ಇಲ್ಲ, ಇಲ್ಲ ! ಯಾರಿಗೂ ತಿಳಿಯದು ! ಇಂದು ಒಂದು ರಾತ್ರಿ ಮಾತ್ರ ಬುಲಾಕಿ ರಾಮ, ಗೂಂಡಾ ಬುಲಾಕಿರಾಮನಲ್ಲ. ಆ ಕತ್ತಲೆಯ ಗಲ್ಲಿಯಲ್ಲಿ ತನ್ನ ಯೋಚನೆಗಳಿಂದ ಎಲ್ಲವನ್ನೂ ಮರೆತು ಮುಂದುವರಿಯುತ್ತಿದ್ದ.

ಪಕ್ಕನೇ, ದೀಪದ ಬೆಳಕು ಮುಖದ ಮೇಲೆ ಬೀಳುತ್ತಲೇ ಬುಲಾಕಿ ತಡೆದು ನಿಂತ, ಅತ್ಯಂತ ಗಡುಸು ಧ್ವನಿಯೊಂದು ಕೇಳಿತು,

— ಯಾರು ?

ಎದುರಿನಲ್ಲಿ ಒಬ್ಬ ಸಾರ್ಜೆಂಟ್ ಮತ್ತು ಇಬ್ಬರು ಕಾನ್‌ಸ್ಟೇಬಲ್ ನಿಂತಿದ್ದರು.

— ಏನನ್ನು ಹೊತ್ತುಕೊಂಡು ಹೋಗುತ್ತಿರುವಿ ? ಏನಿದೆ ಇದರಲ್ಲಿ ?

— ನನ್ನ ತಾಯಿಯ ಮಗು.

— ತಾಯಿ ! ಯಾವ ತಾಯಿ ? ಎಲ್ಲಿ ?

ಬುಲಾಕಿ ಬೆಚ್ಚಿ ಹಿಂದಿರುಗಿ ನೋಡಿದ. ತಾಯಿ ಹಿಂದೆ ಇರಲಿಲ್ಲ. ಗಂಗೆಯ ದಡದಲ್ಲಿ ಕೆಲವೇ ನಿಮಿಷಗಳ ಹಿಂದೆ ಭೇಟಿಯಾಗಿದ್ದ ಆತನ ಆ "ತಾಯಿ" ಅಲ್ಲಿರಲಿಲ್ಲ. ಬೆಳಕಿನಲ್ಲಿ ಕಂಡದ್ದು ನಿರ್ಜನ ಗಲ್ಲಿ ಮಾತ್ರ ಬುಲಾಕಿ ತನ್ನ ಕಣ್ಣುಗಳನ್ನೇ ನಂಬದಾದ.

— ಬಟ್ಟೆಯ ಗಂಟಿನಲ್ಲೇನಿದೆ ? ಬಿಚ್ಚು, ಯಾವ ಮಗು ?

ಬುಲಾಕಿಗೆ ಏನೂ ಮಾಡಬೇಕಾಗಿರಲಿಲ್ಲ. ಪೋಲೀಸರು ಬಟ್ಟೆಯ ಗಂಟನ್ನು ಬಿಚ್ಚುತ್ತಲೇ, ರಕ್ತದಿಂದ ತೊಯ್ದು ಹಸುಗೂಸೊಂದು ಕಂಡುಬಂತು. ಕತ್ತು ಹಿಚುಕಿ ಕೊಂದ ಹಾಗೆ

([illegible]ನೇ ಪುಟ ನೋಡಿ)

# ರೈತರಂಗ

### ರೈತರ ಸಭೆಗಳು

ತಾ. 28ರಂದು ಸಂಜೆ 3-30 ಘಂಟೆಗೆ ಶ್ರೀರಂಗ ಪಟ್ಟಣದಲ್ಲಿ ರಂಗನಾಥಸ್ವಾಮಿ ದೇವಸ್ಥಾನದ ಮುಂದುಗಡೆ ಬಯಲಲ್ಲಿ ತಾಲೂಕಿನ ರೈತರ ಬಹಿರಂಗ ಸಭೆ ಜರಗಿತು. ಸುಮಾರು ನಲ್ವತ್ತು ಗ್ರಾಮಗಳಿಂದ ಸಾವಿರ ರೈತರಿಗಿಂತಲೂ ಹೆಚ್ಚು ಮಂದಿ ಸಭೆಗೆ ಬಂದಿದ್ದರು. ಕರ್ನಾಟಕ ರೈತ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಬೋರೇ ಗೌಡರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಯರಾಂ ಗೌಡರು ಸಭಿಕರನ್ನು ಸ್ವಾಗತಿಸಿದರು. ಶ್ರೀಗಳಾದ ಜವರೇ ಗೌಡರು, ದೇವೇಗೌಡರು, ರಂಗನಾಥಯ್ಯ ಮತ್ತು ಕ. ಪ್ರಾ. ರೈತ ಸಂಘದ ಸಹಕಾರ್ಯದರ್ಶಿ ಶ್ರೀ ಉಗ್ರಪ್ಪನವರು ರೈತ ಸಂಘಟನೆಯ ಅವಶ್ಯಕತೆಯನ್ನು ಕುರಿತು ಭಾಷಣ ಮಾಡಿದರು. ಕ. ಪ್ರಾ. ರೈತ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಬಿ. ವಿ. ಕಕ್ಕಿಲ್ಲಾಯರು ಭೂಸುಧಾರಣೆಯ ಪ್ರಾಮುಖ್ಯತೆ, ಸರಕಾರದ ಧೋರಣೆ, ಜತ್ತಿ ಸಮಿತಿಯ ಶಿಫಾರಸುಗಳನ್ನು ವಿವರಿಸಿ ಕರ್ನಾಟಕ ಪ್ರಾಂತ ರೈತ ಸಮ್ಮೇಳನದ ನಿರ್ಣಯಗಳನ್ನು ತಿಳಿಸಿದರು.

ಒಕ್ಕಲುಗಳ ರಕ್ಷಣೆ, ಭೂವಿತರಣೆ, ಜೋಡಿ—ಇನಾಂ ರದ್ದಿಯತಿ ಕಾಯಿದೆಯ ಜಾರಿಯ ಕುರಿತು ಕರ್ನಾಟಕದ ಆದ್ಯಂತವಾಗಿ ರೈತರ ಸಹಿ ಸಂಗ್ರಹಿಸಿ ಸರಕಾರಕ್ಕೊಂದು ಮನವಿ ಅರ್ಪಿಸುವ ಕಾರ್ಯಕ್ರಮದಲ್ಲಿ ಶ್ರೀರಂಗ ಪಟ್ಟಣ ತಾಲೂಕಿನ ರೈತರು ಭಾಗವಹಿಸಬೇಕೆಂದು ಕೇಳಿಕೊಂಡರು. ಕ. ಪ್ರಾ. ರೈತ ಸಂಘಕ್ಕೆ ಸೇರಿದ ಶ್ರೀರಂಗ ಪಟ್ಟಣ ತಾಲ್ಲೂಕು ರೈತ ಸಂಘವನ್ನು ಸ್ಥಾಪಿಸುವ ನಿರ್ಣಯ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಅಧ್ಯಕ್ಷರ ಭಾಷಣಾನಂತರ ಧನ್ಯವಾದಗಳನ್ನರ್ಪಿಸಲಾಯಿತು. ರಾಷ್ಟ್ರಗೀತೆಯೊಂದಿಗೆ ಸಭೆ ಸಮಾಪ್ತಿಗೊಂಡಿತು.

### ಟಿ. ನರಸಿಪುರ

ಮೈಸೂರು ಜಿಲ್ಲಾ ಟಿ. ನರಸೀಪುರ ತಾಲೂಕು ರೈತರ ಸಭೆಯು ತಾ 29ರಂದು ಟಿ. ನರಸೀಪುರ ಭಗವಾನ್ ಟಾಕೀಸ್‌ನಲ್ಲಿ ಜರಗಿತು. ಬನ್ನೂರಿನ ಶ್ರೀ ಪುಟ್ಟಸ್ವಾಮಿ ಗೌಡರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಂಗನಾಥಯ್ಯನವರು ಸಭಿಕರನ್ನು ಸ್ವಾಗತಿಸುತ್ತ ರೈತ ಸಂಘಟನೆಯ ಪ್ರಾಮುಖ್ಯತೆಯನ್ನು ವಿವರಿಸಿದರು. ಶ್ರೀಗಳಾದ ಎಸ್. ಬೋರೇಗೌಡರು ಮತ್ತು ಚಿಕ್ಕಣ್ಣ ಗೌಡರು ಮಾತನಾಡುತ್ತ ರೈತರ ಕಷ್ಟಗಳನ್ನು ತಿಳಿಸಿದರು ಶ್ರೀ ಬಿ. ವಿ. ಕಕ್ಕಿಲ್ಲಾಯರು ಕರ್ನಾಟಕದ ಪ್ರಾಂತ ರೈತ ಸಮ್ಮೇಳನದ ನಿರ್ಣಯಗಳನ್ನು ವಿವರಿಸಿ, ಅಖಿಲಭಾರತ ಕಿಸಾನ ಸಭೆಯ ಶಾಖೆಯಾದ ಕರ್ನಾಟಕ ರೈತ ಸಂಘಕ್ಕೆ ರೈತರು ಸಹಸ್ರ ಸಂಖ್ಯೆಯಲ್ಲಿ ಸದಸ್ಯರಾಗಿ ಸೇರಿ, ರೈತರ ಹಿತರಕ್ಷಣೆಗೆ ಹೋರಾಡಬೇಕೆಂದು ವಿನಂತಿಸಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಸಮಾಪ್ತಿಗೊಂಡಿತು.

### ಪ್ರಸ್ತುತ ಭೂಮಾರಾಟಕ್ಕೆ ಸರಕಾರ ತಡೆಯಾಜ್ಞೆ ಈಯಲಿ

ತಾರೀಕು 25-11-1957ನೇ ಸೋಮವಾರ ಕುಣಿಗಲ್ ತಾಲೂಕು ಪಾರ್ಟಿ ಸದಸ್ಯರುಸೇರಿ ಸಭೆ ನಡೆಸಲಾಯಿತು ಜಿಲ್ಲಾ ಪಾರ್ಟಿ ಕಾರ್ಯದರ್ಶಿಗಳಾದ ಕಾ॥ ಟಿ. ಆರ್. ರೇವಣ್ಣನವರು, ಮತ್ತು ಕೆ. ವಿ. ಕೃಷ್ಣಸ್ವಾಮಿ ಇವರು, ಪಾರ್ಟಿ ಸದಸ್ಯರನ್ನುದ್ದೇಶಿಸಿ ಪ್ರತಿಯೊಬ್ಬ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ತಿಳಿಸಿ, ಇಲ್ಲಿಯ ವರೆಗೆ ಪಾರ್ಟಿ ಧ್ಯೇಯ ಧೋರಣೆಗಳಿಗೆ ಒಪ್ಪಿ ಕೆಲಸ ಮಾಡುತ್ತಿದ್ದ ಸದಸ್ಯರುಗಳೆಲ್ಲರೂ ಗೊತ್ತಾದ ಚಂದಾ ಕೊಟ್ಟು ಪಾರ್ಟಿ ಸದಸ್ಯರಾಗಿ ಕಾರ್ಡುಗಳನ್ನು ಪಡೆಯಬೇಕಂತಲೂ ಕುಣಿಗಲ್ ತಾಲ್ಲೂಕಿನ ಪ್ರತಿಯೊಬ್ಬ ಪಾರ್ಟಿ ಸದಸ್ಯನೂ ರೈತ ಸಂಘಟನೆಯನ್ನು ಮತ್ತಷ್ಟು ಬಲಪಡಿಸಬೇಕೆಂದು ತಿಳಿಸಿವರು.

ಹಾಲಿ ಭೂಮಾಲಕರು ಮುಂದೆ ಬರಬಹುದಾದ ಭೂಶಾಸನಕ್ಕೆ ಎದುರಾಗಿ ತಮ್ಮ ಜಮೀನುಗಳ ಮಾರಾಟ ನಡೆಸುತ್ತಿರುತ್ತಾರೆ. ಹಾಲಿ ಇರುವ ಗೇಣಿ ಶಾಸನದ ಪ್ರಕಾರ ಉಳುಮೆದಾರನಿಗೆ ಒಂದು ತಿಂಗಳ ನೋಟೀಸಿನ ನಂತರ ಉಳುಮೆದಾರನು ನಗದು ಹಣ ಒದಗಿಸಲಾರದೇ ಹೋದಲ್ಲಿ ತನ್ನ ಕೊಳ್ಳುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಅಂದರೆ ಭೂಮಾಲಕನು ಯಾರಿಗೆ ಬೇಕಾದರೂ ಭೂಮಿಯನ್ನು ಮಾರಾಟ ಮಾಡಬಹುದು. ಇದರಿಂದಾಗಿ ಉದ್ದೇಶಪಟ್ಟ ಭೂಸುಧಾರಣೆಯ ಶಾಸನವು ಬರುವ ಕಾಲಕ್ಕೆ ಅದರ ಪಾವಿತ್ರತೆಯು ನಾಶವಾಗುತ್ತದೆ. ಆದ್ದರಿಂದ ಘನ ಸರ್ಕಾರದವರು ಬಡ ರೈತರ ಮೇಲೆ ದಯವಿಟ್ಟು ಹೊಸ ಶಾಸನವು ಜಾರಿಗೆ ಬರುವವರೆಗೂ ಭೂಮಿಯ ಹಸ್ತಾಂತರಗಳನ್ನು ತಡೆಹಿಡಿಯುವಂತಹ ತುರ್ತು ಆಜ್ಞೆಯೊಂದನ್ನು ಹೊರಡಿಸಿ ಭೂಸುಧಾರಣೆಯ ಪವಿತ್ರ ಉದ್ದೇಶಗಳನ್ನು ಸಾರ್ಥಕಗೊಳಿಸುವಂತೆ ಸರ್ಕಾರವನ್ನು ಒತ್ತಾಯ ಮಾಡಬೇಕೆಂದು ನಿರ್ಣಯಿಸಲಾಯಿತು.

### ಕಿಸಾನಸಭಾ ಸ್ಥಾಪನೆ

ರೈತರ ಚಳುವಳಿಯನ್ನು ಕಟ್ಟಲು ಒಂದು ತಾಲ್ಲೂಕು ಕಿಸಾನ್ ಸಭಾ ಸಮಿತಿ ರಚಿಸಲಾಯಿತು. ಕಿಸಾನ ಸಭಾದ ಅಧ್ಯಕ್ಷ ಟಿ. ಎನ್. ಮಾಸ್ತಿಗೌಡರನ್ನು, ಕಾರ್ಯದರ್ಶಿಗಳಾಗಿ ಚಿಕ್ಕಣ್ಣ ಗೌಡರು ಮತ್ತು ಆರ್. ರಾಮಣ್ಣನವರು, ಖಜಾಂಚಿಯಾಗಿ ಗಂಗ ನೆಂಜಯ್ಯನವರನ್ನು ಚುನಾಯಿಸಲಾಯಿತು. ಕಾರ್ಯಕಾರಿ ಸಮಿತಿಗೆ ನಂಜಯ್ಯ ಶೆಟ್ಟರು, ಬಾಜೀ ಸಾಹೇಬರು, ಸೋಮಯ್ಯನವರು, ಯಂ. ವೆಂಕಟಪ್ಪನವರು, ಸಿದ್ದಲಿಂಗಪ್ಪನವರು, ಲಿಂಗೇಗೌಡರು ಮತ್ತು ಮಹಮದ್ ದಸ್ತಗೀರ್ ಸಾಹೇಬರು, ಮತ್ತು ಇತರೆ ನಾಲ್ಕು ಜನಗಳನ್ನು ಚುನಾಯಿಸಲಾಯಿತು.

---

(೭ನೇ ಪುಟದಿಂದ)

## ಪರಿವರ್ತನೆ!

ಕಾಣುತ್ತಿತ್ತು. ಬಹುಶಃ ಅದು ಎಚ್ಚಿತ್ತು ಜಗತ್ತಿನ ಅನ್ಯ ಪ್ರಾಣಿಗಳ ನಿದ್ದೆಯನ್ನು ಕೆಡಿಸದಿರಲೆಂದು ಮಾಡಿರಬಹುದು.

ದೀಪದ ಬೆಳಕಿನಲ್ಲಿ ಆ ದೃಶ್ಯ ಯಾವುದೋ ಸ್ವಪ್ನಲೋಕದಂತೆ ಭಾಸವಾಯಿತು.

— ಲಫಂಗ! ಕೊಲೆಗಾರ!

ಸಾರ್ಜೆಂಟ್ ತನ್ನ ಕೈಯಲ್ಲಿದ್ದ ಕೋಲನ್ನೆತ್ತಿ ಬಲವಾಗಿ ಬುಲಾಕಿಯ ತಲೆಯ ಮೇಲೆ ಬೀಸಿದ. ಆತ ನೆಲಕ್ಕುರುಳಿದ. ಡಾಲ್‌ಹೌಜ್ ಸರ್ಕಲಿನಲ್ಲಿ ಟ್ರಾಮಿನೊಳಗೆ ಸಿಕ್ಕಿಬಿದ್ದು ಸಜ್ಜನರಿಂದ ಒದೆತ ತಿಂದು ನೆಲಕ್ಕುರುಳಿದಂತೆ ಉರುಳಿದ. ಎದುರು ಅಂಧಕಾರಮಯ ಗಲ್ಲಿಯೊಂದಿತ್ತು. ಗಂಗೆಯ ದಡದಲ್ಲಿ ಆದೇ ತಾನೆ ದೊರೆತ ಆ ಸುವರ್ಣ, ಸುಸಂದರ್ಭ ಅದೆಲ್ಲಿ ಹೋಯಿತೋ........?

## ಮಣ್ಣಿನ ಹಾಡು!

ಮಣ್ಣ-ಮಕ್ಕಳಿಗೆ ಭೂಮಿಯಿಲ್ಲದಿರೆ
ರಾಜ್ಯಬಂದರೇನು?
ದುಡಿವ ಜನಗಳಿಗೆ ಅನ್ನವಿಲ್ಲದಿರೆ
ರಾಜ್ಯ ಹೋದರೇನು?

o o o o

ಭಿಕ್ಷು - ಬಡವರಿಗೆ ನೆಲೆಗಳಿಲ್ಲದಿರೆ
ಪ್ರಗತಿಯಾದರೇನು;
ಕೋಟೆಹೊಟ್ಟೆಗಳು ಸುಟ್ಟುಹೋಗುತಿರೆ
ದೇವನಿದ್ದರೇನು?

o o o o

ಮೋಸಗಾರಿಕೆಗೆ, ರಕ್ತ - ಶೋಷಣೆಗೆ
ಕೊನೆಯೆ ಇಲ್ಲವೇನು;
ದೀನ-ಹೀನರಿಗೆ ನ್ಯಾಯದೊರೆಯದಿರೆ
ಸತ್ಯ ಉಳಿದರೇನು?

ಸಂಪ್ರದಾಯಗಳ ಟೊಳ್ಳು-ಹೊಟ್ಟೆಗಳು
ಎಷ್ಟು ಬೆಳೆದರೇನು;
ಮಳಲು-ಗಾಡುಗಳಮೇಲೆಮೋಡಗಳು
ಕಣ್ಣು ತೆರೆದರೇನು?

o o o o

ಅನ್ನ - ನೀರುಗಳು ದೊರೆಯದಿರುವಲ್ಲಿ
ಹಾಲು ಹರಿದರೇನು;
ಸತ್ತ ಗೋರಿಗಳ ಮೇಲೆ ಹೂವುಗಳು
ಜೇನು ಸುರಿದರೇನು?

o o o o

ಮಣ್ಣ -ಮಕ್ಕಳಿಗೆ ಭೂಮಿಯಿಲ್ಲದಿರೆ
ರಾಜ್ಯ ಬಂದರೇನು;
ದುಡಿವ ಜನಗಳಿಗೆ ಅನ್ನವಿಲ್ಲದಿರೆ
ರಾಜ್ಯ ಹೋದರೇನು?

"ಹೇಮಂತ" ಬೆಳಗಾವಿ

## ಓದುಗರ ಓಲೆ

### ಭೂಮಿ ಮಾರುವುದು ತುರ್ತಾಗಿ ನಿಲ್ಲಿಸಲ್ಪಡಬೇಕು

ಸ್ವಾಮೀ,


ಭೂಸುಧಾರಣೆಗಳ ಬಗ್ಗೆ ಕಾಂಗ್ರೆಸ್ ಸರಕಾರ ವಿಮುಖ ಧೋರಣೆ ತಳೆದರೂ ರೈತ ಸಂಘಗಳ ಒತ್ತಡದಿಂದಲೂ, ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭೂಸುಧಾರಣೆಗಳಿಗೆ ಪ್ರಾಮುಖ್ಯತೆ ಕೊಡಬೇಕೆಂದು ಸೂಚಿಸಿದ್ದರಿಂದಲೂ, ವಿಧಿಯಿಲ್ಲದೆ ಸುಧಾರಣೆ ಮಾಡಬೇಕೆಂದು ಕಾಂಗ್ರೆಸ್ ಸರಕಾರಗಳು ಯತ್ನಿಸುತ್ತಿವೆಯೋನೊ ನಿಜ! ಆದರೆ ಈ ಸಮಯದಲ್ಲಿ ಆಂಧ್ರ ಪ್ರದೇಶ ರಾಜ್ಯಪಾಲರು ಜಾರಿ ಮಾಡಿದ್ದ ಆರ್ಡಿನೆನ್ಸನ್ನು ನೋಡಿದರೆ ಎಲ್ಲರಿಗೂ ಆಶ್ಚರ್ಯ, ಅನುಮಾನ ಹುಟ್ಟುತ್ತದೆ. "3 ತಿಂಗಳು ಒಳಗಾಗಿ 20 ಎಕರೆಗೆ ಮೇಲಿದ್ದ ರೈತರೆಲ್ಲರು ಸರಕಾರಕ್ಕೆ ಭೂವಿವರವನ್ನೂ ತಿಳಿಸಬೇಕಂತೆ". ನಿಜವಾಗಿ ಭೂಸುಧಾರಣೆ ತರಲು, ಈ ಆರ್ಡಿನೆನ್ಸ ಅವಶ್ಯಕತೆ ಇತ್ತೆ? ದೊಡ್ಡ ದೊಡ್ಡ ಭೂಸ್ವಾಮಿಗಳಿಗೂ ಮತ್ತು ಜೋಡಿ ಇನಾಂದಾರರಿಗೂ ಒಂದು ಎಚ್ಚರಿಕೆ ಕೊಡೋಕ್ಕೆ ಮಾತ್ರ, ಈ ಆರ್ಡಿನೆನ್ಸ ಜಾರಿ ಮಾಡಿದ್ದಾರೆಂದು, ಅರ್ಥವಾಗುತ್ತದೆ. ದೀಪ ಇದ್ದಾಗಲೇ – ಮನೆ ಸರಿಮಾಡಿಕೊ ಅಂಥ ಎಚ್ಚರಿಕೆ; ಕೊಡೊ ಆರ್ಡಿನೆನ್ಸ ಮಾತ್ರವೇ ಇದು; ಈ ಎಚ್ಚರಿಕೆ ಇತ್ತುದರಿಂದಾಗಿ ಆಂಧ್ರ ಪ್ರದೇಶದಲ್ಲಿ ಮಾತ್ರವಲ್ಲದೆ, ಆದರ ಪಕ್ಕದಲ್ಲಿದ್ದ ರಾಜ್ಯಗಳಿಗೂ ನಷ್ಟವಾಗುತ್ತಿದೆ.

ಈಗಾಗಲೇ ತುಮಕೂರು ಜಿಲ್ಲೆಯಲ್ಲಿದ್ದ **ಪಾವಗಡ, ಮಧುಗಿರಿ, ಕೊರಟಗೆರೆ** ತಾಲ್ಲೂಕುಗಳಲ್ಲಿ, ಜೋಡಿದಾರರು, ಭೂಸ್ವಾಮಿಗಳು, ಇನಾಂದಾರರು ತಮ್ಮ ಭೂಮಿಗಳನ್ನು ಮಾರುತ್ತಿದ್ದಾರೆ. ಎಷ್ಟೋ ವರುಷಗಳಿಂದ ದುಡಿಯುತ್ತಿದ್ದ ಗೇಣಿದಾರರನ್ನೂ ಬಡ ರೈತರನ್ನೂ ಅತ್ಯಂತ ಹೀನ ರೀತಿಯಲ್ಲಿ ಇನ್ನೂ ವಂಚಿಸುವುದಕ್ಕೆ ಇದೊಂದು ನಿದರ್ಶನ. ಸಾಹುಕಾರರು, ಆ ಭೂಮಿಗಳನ್ನು ಕೊಂಡುಕೊಳ್ಳುತ್ತಿದ್ದಾರೆ; ಆದ್ದರಿಂದ, ಗೇಣಿದಾರರಿಗೂ, ಬಡ ರೈತರಿಗೂ ಜೀವನೋಪಾದಿ ಇಲ್ಲದೆ ಹೋಗುತ್ತಿದೆ, ಪ್ರಾಂತಗಳಲ್ಲಿ ರೈತರು, ಸಂಘಟಿತರಾಗಿ ಎಂ. ಎಲ್. ಎ. ಗಳಿಗೆ ಹೇಳಿ, ಆಗತ್ತಬಿದ್ದಲ್ಲಿ ಸಂಘಟಿತ ಹೋರಾಟ ನಡೆಸಿಯೂ ಪ್ರಭುತ್ವ ಗಮನಕ್ಕೆ ತಂದು, ಅಸೆಂಬ್ಲಿಯಲ್ಲಿ ಚರ್ಚೆ ನಡಿಸುವ ಹಾಗೆ ಮಾಡಬೇಕು. 51-52ನೇ ಇಸವಿಯ ನಂತರ ಮಾರಿದ ಭೂಮಿಗಳ ರಿಜಿಸ್ಟರ್ ಫೈಲ್ ಮಾಡುವಂತಹ ಕಾನೂನು ತರುವುದು ಅಗತ್ಯ. ಸರಕಾರ ಭೂಮಾಲಿಕರ ಭಂಟನಲ್ಲವೆಂದು ತೋರಿಸಬೇಕಾದರೆ, ರೈತರ ಹಿತಕ್ಕೆ ಧಕ್ಕೆ ತರುವಂಥ ಈ ಭೂಮಾರಾಟವನ್ನು ನಿಲ್ಲಿಸಲು ಕೂಡಲೇ ಆಜ್ಞೆ ಹೊರಡಿಸಲಿ.

"ಬಿಯರ್"

ಎಗುವಪಲ್ಲಿ, ಪಾವಗಡ

# ವಿಶ್ವದ ಇತರ ಭಾಗಗಳಲ್ಲೂ ಸಮಾಜವಾದ ವಿಜಯಿಯಾಗುವುದು - ಮಾಸ್ಕೋದಲ್ಲಿ ಅಜಯ ಘೋಷ್



**ನವೆಂಬರ್ ೬ ರಂದು ಮಾಸ್ಕೋ ನಗರದಲ್ಲಿ ೧೫,೦೦೦ಕ್ಕೂ ಮೇಲ್ಪಟ್ಟ ಜನರ ಸಭೆಯಲ್ಲಿ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಧುರೀಣರು ಭಾಷಣ ಮಾಡಿದರು. ಭಾಷಣ ಮಾಡಿದ ೨೬ ನಾಯಕರಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾದ ಕಾ|| ಅಜಯ ಘೋಷ್‌ರವರೊಬ್ಬರಾಗಿದ್ದರು.**

## ಅಜಯ ಘೋಷ್ ಭಾಷಣ

ಪ್ರಿಯ ಕಾಮ್ರೇಡ್ಸ್,

ಅಕ್ಟೋಬರ್ ಮಹಾ ಸಮಾಜವಾದಿ ಕ್ರಾಂತಿಯ 40ನೇ ವಾರ್ಷಿಕ ಸಮಾರಂಭದ ಶುಭ ಸಂದರ್ಭದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಪರವಾಗಿ ಅಭಿನಂದಿಸುತ್ತೇನೆ. (ಹರ್ಷೋದ್ಗಾರ)

ನಲವತ್ತು ವರ್ಷಗಳಿಂದ ಪ್ರಗತಿಶೀಲ ಮಾನವತೆಯ ಮುಂದಳವಾಗಿ ನಿಂತಿರುವ ಸೋವಿಯೆತ್ ಜನತೆಗೆ ಭಾರತ ಕಮ್ಯೂನಿಸ್ಟ್ ಪಕ್ಷದ ನಿಯೋಗದ ಪರವಾಗಿ ಅಭಿನಂದಿಸುತ್ತೇನೆ (ಹರ್ಷೋದ್ಗಾರ). ಸೋವಿಯೆತ್ ರಷ್ಯವು ಎಲ್ಲ ಕ್ಷೇತ್ರಗಳಲ್ಲೂ ಸಾಧಿಸಿರುವ ಅದ್ಭುತ ಪ್ರಗತಿಗೆ ಮತ್ತು ವಿಶ್ವ ಶಾಂತಿಗೆ ಮಾಡಿದ ಅಪಾರ ಸಹಾಯಕ್ಕೆ ನಾವು ಅಭಿನಂದಿಸುತ್ತೇವೆ.

ಸೋವಿಯೆತ್ ಜನತೆಯನ್ನು ಕಮ್ಯೂನಿಸ್ಟ್ ಗುರಿಯತ್ತ ಕೊಂಡೊಯ್ಯುತ್ತಿರುವ ಮಹಾ ಲೆನಿನ್‌ರವರು ಸ್ಥಾಪಿಸಿರುವ ಸೋವಿಯೆತ್ ಕಮ್ಯೂನಿಸ್ಟ್ ಪಕ್ಷಕ್ಕೆ ನಾವು ಅಭಿನಂದಿಸುತ್ತೇವೆ.

ಅಕ್ಟೋಬರ್ ಕ್ರಾಂತಿಯು ವಿಶ್ವದ ಆರನೇ ಒಂದು ಭಾಗದಲ್ಲಿ ಬಂಡವಾಳಶಾಹಿ-ಜಮೀನ್ದಾರ ಆಡಳಿತೆಯನ್ನು ಕೊನೆಗೊಳಿಸಿದ್ದು ದಲ್ಲದೆ, ಇಡೀ ಪ್ರಪಂಚದ ಜನತೆಯ ಪ್ರಗತಿಗೆ ಮಾರ್ಗದರ್ಶನ ಮಾಡಿದೆ. ಅದು ಸಾಮ್ರಾಜ್ಯಶಾಹಿಯನ್ನು ಬುಡಮೇಲು ಮಾಡಿತು ಮತ್ತು ಗುಲಾಮ ರಾಷ್ಟ್ರಗಳ ಬಂಧ ವಿಮೋಚನಾ ಹೋರಾಟವನ್ನು ಬಹಳ ಮಟ್ಟಿಗೆ ಬಲಗೊಳಿಸಿತು. ಶೋಷಣೆ ಇಲ್ಲದ, ವರ್ಣಭೇದವಿಲ್ಲದ, ಯುದ್ಧದ ಘೋರ ಗಂಡಾಂತರವಿಲ್ಲದ ಹೊಸ ಸಮಾಜ ನಿರ್ಮಾಣದ ಮನುಷ್ಯನ ಶತಮಾನಗಳ ಕನಸು ನನಸಾಯಿತು.

ಅಕ್ಟೋಬರ್ ಕ್ರಾಂತಿಯಿಂದ ಸ್ಫೂರ್ತಿಗೊಂಡ ವಿಶ್ವದ ಶ್ರಮಜೀವಿ ಜನತೆ ಪ್ರಗತಿಗೆ ಏಕಮಾತ್ರ ದಾರಿಯಾದ ಮಾರ್ಕ್ಸ್-ಲೆನಿನ್ ಸಿದ್ಧಾಂತದ ಹಾದಿಯನ್ನು ಸ್ವೀಕರಿಸಿತು. ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಮತ್ತು ಜಮೀನ್ದಾರಿ ಶೋಷಣೆಯು ವಿಶ್ವದ ಮೂರನೇ ಒಂದು ಭಾಗದಲ್ಲಿ ಈಗ ಕೊನೆಗೊಂಡಿದೆ. ಶೀಘ್ರದಲ್ಲೇ ಇತರ ರಾಷ್ಟ್ರಗಳಲ್ಲೂ ಸೋಷಲಿಸಂ ವಿಜಯವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. (ಹರ್ಷೋದ್ಗಾರ)

ಕಾಮ್ರೇಡ್ಸ್, ಇಂದು ಏಷಿಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ಹೊಸ ಚೇತನ ತುಂಬಿ ತುಳುಕಾಡುತ್ತಿದೆ. ಚೀನದ ಕಮ್ಯೂನಿಸ್ಟ್ ಪಾರ್ಟಿಯ ನಾಯಕತ್ವದಲ್ಲಿ ಚೀನೀ ಜನತೆ ಅದ್ಭುತ ಕ್ರಾಂತಿಯನ್ನು ಸಾಧಿಸಿದೆ. ಏಷ್ಯಾದ ಹಲವು ರಾಷ್ಟ್ರಗಳು ರಾಷ್ಟ್ರೀಯ ಸ್ವಾತಂತ್ರ್ಯ ಗಳಿಸಿವೆ. ಗುಲಾಮ ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿ ಬೆಳೆಯುತ್ತಿದೆ. ಇದರ ಪರಿಣಾಮವಾಗಿ ವಿಶ್ವದಲ್ಲೇ ಮೂಲಭೂತ ಬದಲಾವಣೆಯಾಗಿದೆ. ಇದಕ್ಕೆ ಅಕ್ಟೋಬರ್ ಮಹಾ ಕ್ರಾಂತಿಯೇ ಕಾರಣ.

ಕಾಮ್ರೇಡ್ಸ್, ಭಾರತದ ಕಾರ್ಮಿಕ ವರ್ಗದ ಪಕ್ಷವಾದ ಭಾರತ ಕಮ್ಯೂನಿಸ್ಟ್ ಪಾರ್ಟಿಯು ಹುಟ್ಟಿದಾಗಿನಿಂದಲೂ ಅಕ್ಟೋಬರ್ ಕ್ರಾಂತಿಯಿಂದ ಸ್ಫೂರ್ತಿಗೊಂಡು ಭಾರತದ ಜನತೆಯ ಉತ್ತಮ ಪರಂಪರೆಗನುಗುಣವಾಗಿ ದೇಶದ ಸ್ವಾತಂತ್ರ್ಯಕ್ಕೂ, ಪ್ರಜಾ ಪ್ರಭುತ್ವಕ್ಕೂ, ಸೋವಿಯೆತ್ ಯೂನಿಯನ್ ಮತ್ತು ಅದರ ಜನತೆಯ ಜೊತೆಗೆ ಸೌಹಾರ್ದ ಸಂಬಂಧಕ್ಕೂ ಹೋರಾಡಿದೆ.

ಕಮ್ಯೂನಿಸ್ಟರ ಮತ್ತು ಇತರ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ಭಾರತದಲ್ಲಿ ಗಣನೀಯವಾದ ವಿಜಯ ಗಳಿಸಿರುವುದು ಗೊತ್ತಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಸಾಹತಾಗಿದ್ದ ಭಾರತವು ಈಗ ಸ್ವತಂತ್ರ ಗಣರಾಜ್ಯವಾಗಿದೆ. ಅದು ರಾಷ್ಟ್ರೀಯ ಸ್ವಾತಂತ್ರ್ಯದ ದಾರಿಯನ್ನನುಸರಿಸುತ್ತಿದೆ, ಮತ್ತು ವಿಶ್ವ ಶಾಂತಿಗೆ ತುಂಬಾ ಸಹಾಯಕಾರಿಯಾಗಿದೆ. (ಹರ್ಷೋದ್ಗಾರ)

ಭಾರತ ಕಮ್ಯೂನಿಸ್ಟ್ ಪಾರ್ಟಿಯು ದೇಶದ ರಾಜಕೀಯದಲ್ಲಿ ಒಂದು ಗಣನೀಯ ಶಕ್ತಿಯಾಗಿ ಬಂದಿರುವುದು ಕಳೆದ ಸಾರ್ವತ್ರಿಕ ಚುನಾವಣೆ ತೋರಿಸಿದೆ. ಅದೀಗ ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಶಾಂತಿಯ ಭದ್ರತೆಗೂ, ಭಾರತ-ರಷ್ಯ ಮೈತ್ರಿಯನ್ನು ಬಲಗೊಳಿಸಲಿಕ್ಕೂ, ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ಸಂಬಂಧವನ್ನು ಬಿಗಿಗೊಳಿಸಲಿಕ್ಕೂ, ಮಾರ್ಕ್ಸ್-ಲೆನಿನ್ ಸಿದ್ಧಾಂತದ ವಿಜಯಕ್ಕೂ ಯಶಸ್ವಿಯಾಗಿ ದುಡಿಯಲು ಹೆಚ್ಚಿನ ಪಾತ್ರ ವಹಿಸಲು ಸಾಧ್ಯವಾಗಿದೆ. (ಹರ್ಷೋದ್ಗಾರ)

ಕಾಮ್ರೇಡ್ಸ್, ಭಾರತ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಮುಂದಿರುವ ಕರ್ತವ್ಯಗಳನ್ನು ಪಾಲಿಸಲು ಶಕ್ತಿಮೀರಿ ದುಡಿಯುವುದೆಂಬ ಭರವಸೆ ಕೊಡುತ್ತೇನೆ (ಹರ್ಷೋದ್ಗಾರ).

ಪ್ರಗತಿಗಾಮಿ ಜನಾಂಗದ ಮುಂದಾಳಾದ ಸೋವಿಯೆತ್ ಯೂನಿಯನ್ ಚಿರಾಯುವಾಗಲಿ! (ಹರ್ಷೋದ್ಗಾರ).

ಅಕ್ಟೋಬರ್ ಮಹಾ ಕ್ರಾಂತಿಯ ವಿಜಯ ಪತಾಕೆಯು ಚಿರಾಯುವಾಗಲಿ!

ಕಮ್ಯೂನಿಸಂನತ್ತ ಮುಂದರಿಯುವ ಸೋವಿಯೆತ್ ಜನತೆಯ ನಾಯಕ ಸೋವಿಯತ್ ಕಮ್ಯೂನಿಸ್ಟ್ ಪಾರ್ಟಿ ಚಿರಾಯುವಾಗಲಿ! (ಹರ್ಷೋದ್ಗಾರ)

ಮಾರ್ಕ್ಸ್-ಲೆನಿನ್ ಸಿದ್ಧಾಂತದ ಅಮರ ತತ್ವಗಳು ವಿಜಯವಾಗಲಿ. (ಹರ್ಷೋದ್ಗಾರ)

ವಿಶ್ವಾದ್ಯಂತ ಶಾಂತಿ ಚಿರಾಯುವಾಗಲಿ!

ಭಾರತ ಮತ್ತು ರಷ್ಯ ಜನತೆಯ ಮೈತ್ರಿ ಚಿರಾಯುವಾಗಲಿ! (ಹರ್ಷೋದ್ಗಾರ)

ಹಿಂದೀ-ರೂಸೀ ಭಾಯಿ ಭಾಯಿ!! (ದೀರ್ಘ ಹರ್ಷೋದ್ಗಾರ)

# ಪಾರ್ಟಿಯ ಪುನರ್ಘಟನೆ

(ಮಧ್ಯದ ಪುಟದಿಂದ)

ಸಿ ತಮ್ಮ ಕೆಳಗೆ ಕೆಲಸ ಮಾಡುತ್ತಿರುವ ಸಮಿತಿಗಳಿಗೆ ಮಾದರಿಯಾಗಿರಬೇಕು. ಹೀಗೆ ಮಾಡದಿದ್ದಲ್ಲಿ, ಮೇಲಿನ ಸಮಿತಿಗಳು **ಕಾರ್ಯರೂಪದಲ್ಲಿ** ಬದಲಾವಣೆ ತೋರಿಸದಿದ್ದಲ್ಲಿ, ಕೇವಲ ಬಾಯಿಮಾತಿನಲ್ಲಿ ಹೇಳುವುದರಿಂದ ಹೆಚ್ಚು ಸಾಧನೆಯಾಗದು. ಇದು ಮತ್ತು ಶಿಸ್ತಿನ ಕುರಿತಾದ ಇತರ ವಿಷಯಗಳು ಚರ್ಚೆಯಾಗುವುದಗತ್ಯ.

2. ಶಿಸ್ತನ್ನು ಪುನರ್ರೂಪಿಸುವಾಗ ಅದರೊಂದಿಗೆ ಎಲ್ಲ ರೂಪಗಳಲ್ಲೂ ಕಾಣಬರುವ **ಅಧಿಕಾರಶಾಹೀ** ವರ್ತನೆಯ ಇದಿರು ದೃಢವಾದ ಹೋರಾಟವನ್ನು ಸಾಗಿಸಬೇಕು. ಪರಿಣಾಮಕಾರಿಯಾದ ರೀತಿಯ **ಪಾರ್ಟಿಯೊಳಗಣ ಪ್ರಜಾಪ್ರಭುತ್ವ** ಮತ್ತು ಸಂಘಟನೆಯಲ್ಲಿ ಸಜೀವವಾದ **ಪಾರ್ಟಿಯೊಳಗಣ ಜೀವನ**ವನ್ನು ಪುನರುಜ್ಜೀವಿಸುವಾಗ, ಈವರೆಗೆ ಕೂಡಿಕೊಂಡಿರುವ ನ್ಯೂನತೆಗಳನ್ನು ನಿವಾರಿಸಲು ಮತ್ತು ಪಾರ್ಟಿ ಧೋರಣೆಗಳನ್ನು ಕಾರ್ಯರೂಪದಲ್ಲಿ ತರುವ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸುವಂತಾಗಲು ಇಡೀ ಪಾರ್ಟಿಯನ್ನು ಎಚ್ಚರಿಸಬೇಕು. ಈ ಸಂದರ್ಭದಲ್ಲಿ, ಒಂದು ಸಲಹೆ ಇದೆ, ಅದು ಪಾರ್ಟಿಯು ಇಂದು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು, ಕೇಂದ್ರ ಕಾರ್ಯಕಾರೀ ಸಮಿತಿ ಮತ್ತು ಪ್ರಾಂತ ಸಮಿತಿಗಳು, ಸಾಧ್ಯವಿರುವಲ್ಲೆಲ್ಲಾ ವಿಶಾಲವಾದ ರೀತಿಯಲ್ಲಿ ಪಾರ್ಟಿಯೊಳಗೆ ಚರ್ಚೆಯನ್ನು ಆರಂಭಿಸಬೇಕು ಮತ್ತು ಧೋರಣೆಗಳನ್ನು ರೂಪಿಸುವುದರಲ್ಲಿ ಇಡೀ ಪಾರ್ಟಿಯು ಭಾಗಿಯಾಗುವಂತೆ ಮಾಡಬೇಕು. ಪಾರ್ಟಿಯೊಳಗಣ ಪ್ರಜಾಪ್ರಭುತ್ವ, ಸಜೀವ ಪಾರ್ಟಿಯೊಳಜೀವನದ ಇತರ ಪ್ರಶ್ನೆಗಳನ್ನು ಚರ್ಚಿಸಬೇಕಾಗಿದೆ ಮತ್ತು ನಿರ್ದಿಷ್ಟವಾದ ತೀರ್ಮಾನಗಳಿಗೆ ಬರಬೇಕಾಗಿದೆ.

3. **ಸಾಮೂಹಿಕ ಕಾರ್ಯಾಚರಣೆ**ಯು ಇಂದು ಅನೇಕ ಘಟಕಗಳಲ್ಲಿ ಕ್ಲಿಷ್ಟವಾಗಿದೆ, ಇದು ಸರಿಯಾದ ಸಂಘಟನೆ ಮತ್ತು ಶಿಸ್ತು ಅಭಾವವಾಗಿದೆಯೆಂಬುದರಿಂದ ಮಾತ್ರವೇ ಅಲ್ಲ, ಸ್ವಹಿತವಾದ ದೃಷ್ಟಿಕೋಣ, ಶಂಕೆ, ಪರಸ್ಪರ ಕಾಮ್ರೇಡು ರೀತ್ಯ ಭಾವನೆ ಇಲ್ಲದಿರುವುದು, ಅನಾದರಣೆಯ ಭಾವದಿಂದ ಕೂಡಿದ್ದು ಟೀಕೆಯ ಬಗ್ಗೆ ತಾಳ್ಮೆ ಇಲ್ಲದಿರುವುದು ಸಹ ಕಾರಣವಾಗಿದೆ. ಅನೇಕ ಕಡೆಗಳಲ್ಲಿ ಇದು ದೊಡ್ಡ ಸಮಸ್ಯೆಯಾಗಿದೆ. ಈ ಪ್ರವೃತ್ತಿಗಳನ್ನು ಹೇಗೆ ನಿವಾರಿಸಬೇಕೆನ್ನುವುದರ ಬಗ್ಗೆ ಪಾರ್ಟಿಯು ಅನಿರ್ಬಂಧವಾಗಿ ಚರ್ಚೆ ನಡೆಸಬೇಕಿದೆ.

4. **ಪಾರ್ಟಿ ಪತ್ರಿಕೆ**—ನಮ್ಮ ಪತ್ರಿಕೆಗಳು ಮತ್ತು ಪ್ರಕಟಣೆಗಳು ನಮ್ಮ ಅತ್ಯಂತ ಮುಖ್ಯ ಸೈದ್ಧಾಂತಿಕ ಅಸ್ತ್ರವಾಗಿವೆ. ಅವುಗಳ ದರ್ಜೆಯನ್ನು ಉತ್ತಮಗೊಳಿಸುವ ಮತ್ತು ಸಾಮೂಹಿಕ ಚಳುವಳಿಯೊಂದಿಗೆ ಹಾಗೂ ಪಾರ್ಟಿಯೊಳಗೂ ಜೀವನದೊಂದಿಗೆ ಅವನ್ನು ಸಂಬಂಧಿಸುವ ಪ್ರಶ್ನೆಯು ಅತ್ಯಂತ ಜರೂರಾಗಿದೆ ಮತ್ತು ಈ ಬಗ್ಗೆ ನಿರ್ದಿಷ್ಟವಾದ ಸಲಹೆಗಳು

(ಕೊನೆ ಪುಟ ನೋಡಿ)

---

(೬ನೇ ಪುಟದಿಂದ)

ತಿಳಿಯಲಾಗಿದೆ.

ಇದಲ್ಲದೆ, ಪೋಲೀಸರಲ್ಲೇ ಕಳ್ಳಭಟ್ಟಿ ಸಾರಾಯಿಯ ಉಚಿತ ಸೇವನೆಯು, ಒಂದು ನೇರವಾದ ಬೆಂಬಲವಾಗಿ ಕಳ್ಳಭಟ್ಟಿ ತಯಾರಕರು ಇಷ್ಟರವರೆಗೆ ಬಲಿತಿದ್ದುದೂ ನಿಜ. ಹಾಗಾಗಿ ಈಗ ಪೋಲೀಸ್ ಖಾತೆಯೂ ತಾವು ಆದರ್ಶ ರೀತಿಯಲ್ಲಿ ನಡೆದುಕೊಂಡಲ್ಲಿ, ಭದ್ರಾವತಿ ಕಾರ್ಮಿಕರು ಹಾಗೂ ಇತರ ಜನತೆಗೆ ಶಾಪರೂಪವಾದ, ಗುಡಿ ಕೈಗಾರಿಕೆಯಾಗಿರುವಂತಹ ಈ ಕಳ್ಳಭಟ್ಟಿ ಸಾರಾಯಿ ತಯಾರಿಯನ್ನು ಸಂಪೂರ್ಣ ನಿರ್ಮೂಲನ ಮಾಡಬಹುದು. ಜಿಲ್ಲಾ ಪೋಲೀಸಾಧಿಕಾರಿಗಳು ಈ ದಿಶೆಯಲ್ಲೇ ಮುಂದುವರಿಯುವರೆಂದು ಹಾರೈಸುತ್ತೇವೆ.

---

(೩ನೇ ಪುಟದಿಂದ)

ಅವರಿಗೆ ಮೆಟರ್ನಿಟಿ ಸೌಲಭ್ಯವಿಲ್ಲ. ಈ ವಿಶೇಷ ಪರಿಸ್ಥಿತಿ ಇರುವುದರಿಂದ ಅದನ್ನು ಹತೋಟಿಗೆ ತರಲು ಶಾಸನವು ಅಗತ್ಯ. ರಾಜ್ಯ ಸರಕಾರಗಳ ಶಾಸನಗಳ ಒಂದೇ ರೀತಿಯಾಗಿರದೆ ಅವು ಪರಿಣಾಮಕಾರಿಯಾಗಲಾರವು. ಆದ್ದರಿಂದ ಕೇಂದ್ರ ಶಾಸನ ಅಗತ್ಯವೆಂದು ಗೋಪಾಲನ್ ತಿಳಿಸಿದರು.

ಬ್ರಾಂಚುಗಳನ್ನು ಮಾಡಿ ಮಾಲಿಕರು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದರಿಂದ "ಮಾಲಿಕ"ವೆಂಬ ಪದವನ್ನು ಸ್ಪಷ್ಟಗೊಳಿಸಬೇಕೆಂದು ತಂಗಮಣಿಯವರು ಸೂಚಿಸಿದರು. ಅಲ್ಲದೆ ಕನಿಷ್ಠ ವೇತನ ಮತ್ತು ಕೆಲಸ ಭದ್ರತೆಯೂ ಇರಬೇಕೆಂದು ಹೇಳಿದರು. ಚರ್ಚೆ ಮುಗಿಯದಿದ್ದರೂ ಬೀಡಿ ಕಾರ್ಮಿಕರ ಚಿಂತಾದಾಯಕ ಪರಿಸ್ಥಿತಿ ಬಗ್ಗೆ ಎಲ್ಲರ ಗಮನವನ್ನೆಳೆಯಲು ಗೋಪಾಲನ್‌ರವರ ಪ್ರಯತ್ನ ಯಶಸ್ವಿಯಾಗಿದೆ.

# ಭಾರತ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಗೊತ್ತುವಳಿ

(೯ನೇ ಪುಟದಿಂದ)

ಅಗತ್ಯವಾಗಿವೆ.

5. **ಪಾರ್ಟಿ ಶಿಕ್ಷಣವು** ಅತ್ಯಂತ ನಿಕೃಷ್ಟವಾಗಿ ಕಾಣಲಾಗಿರುವ ಒಂದು ಕೆಲಸವಾಗಿದೆ. ಇದನ್ನು ಹೇಗೆ ಸಂಘಟಿಸಬೇಕು, ಯಾವ ಬಗೆಯ ಮತ್ತು ಮಟ್ಟದ ಶಾಲೆಗಳು ಮತ್ತು ಪಾಠಗಳು ಅಗತ್ಯವೆಂಬುದನ್ನು ಚರ್ಚಿಸಬೇಕಾಗಿದೆ.

6. ನಮ್ಮ ಮುಂದಿರುವ ಅತ್ಯಂತ ಜರೂರು ಕಾರ್ಯವೆಂದರೆ ಅದು ಇಡೀ ಪಾರ್ಟಿಯನ್ನು **ಸಕ್ರಿಯ**ಗೊಳಿಸುವುದು. ಈಗಿರತಕ್ಕ ಅಕ್ರಿಯ ಪರಿಸ್ಥಿತಿಯು ಸಾಕಷ್ಟ ಮಟ್ಟಿಗೆ, ಎಲ್ಲ ಕಾಮ್ರೇಡುಗಳು ಮಾಡಲು ಸಾಧ್ಯವಿರುವಂಥ ಚಟುವಟಿಕೆಗಳನ್ನು ನಾವು ರೂಪಿಸದೆ ಇರುವುದಾಗಿದೆ. ಅನೇಕ ಸಂಧರ್ಭಗಳಲ್ಲಿ, ಪಾರ್ಟಿಯು ಬಹುಮುಖದ ಚಟುವಟಿಕೆಯ ಮುಖ್ಯತ್ವವನ್ನು ಒತ್ತಿ ಹೇಳಿದೆ. ಇಂದು ಇದನ್ನು ಒತ್ತಿ ಹೇಳುವುದಷ್ಟೇ ಅಲ್ಲ, ಆದರೆ ಅದನ್ನು ಯಾವ ಸೈದ್ಧಾಂತಿಕ-ರಾಜಕೀಯ ಅಥವಾ ಸಂಘಟನಾತ್ಮಕ ಅಂಶಗಳು ತಡೆಗಟ್ಟುತ್ತಿವೆ ಎಂಬುದನ್ನು ನಿರ್ದಿಷ್ಟವಾಗಿ ಪರಿಶೀಲಿಸುವುದು ಅಗತ್ಯವಾಗಿದೆ.

7. ಸಾಮೂಹಿಕ ರಂಗಗಳು ಮತ್ತು ಇತರ ಚಟುವಟಿಕೆಗಳಲ್ಲಿ ಪಾರ್ಟಿಯು ನಾಯಕತ್ವವನ್ನು ನೀಡಲು ಯಾವ ಬಗೆಯ **ಉಪ ಸಮಿತಿ**ಗಳು ಮತ್ತು ಯಾವ ಮಟ್ಟದಲ್ಲಿ ಅಗತ್ಯವಿದೆ? ಇಂದು ಇರತಕ್ಕ ಉಪಸಮಿತಿಗಳ ಅನುಭವವೇನು? ಫ್ರಾಕ್ಷನ್ನುಗಳ ಬಗ್ಗೆ ನಮ್ಮ ತೀರ್ಮಾನದ ಪರಿಣಾಮವೇನು? ಅನುಭವದ ಆಧಾರದ ಮೇಲೆ ಈ ಪ್ರಶ್ನೆಗಳಿಗೆ ಉತ್ತರವು ಅಗತ್ಯವಿದೆ. ನಮ್ಮ ಮನಸ್ಸಿನಲ್ಲಿ ಇರುವುದು ಸಾಮೂಹಿಕ ಚಳವಳಿಯ ವಿಶಿಷ್ಟ ಸಮಸ್ಯೆಗಳಲ್ಲ, ಆದರೆ ಪಾರ್ಟಿಯು ಈ ಚಳುವಳಿಯನ್ನು ಯಾವ ರೀತಿಯಲ್ಲಿ ಮಾರ್ಗದರ್ಶನವೀಯಬೇಕೆಂದು ಮತ್ತು ನಡೆಸಿಕೊಂಡು ಹೋಗಬೇಕೆಂಬುದು.

8. ಪಾರ್ಟಿಯ ಸಾರ್ವತ್ರಿಕ ಚಟುವಟಿಕೆ ಹಾಗೂ ಸ್ತ್ರೀಯರ ಚಳುವಳಿ, ಉಪಾಧ್ಯಾಯರ ಚಳುವಳಿ ಇತ್ಯಾದಿ ವಿಶಿಷ್ಟ ವಿಷಯಗಳ ಸಂಬಂಧದಲ್ಲಿಯೂ ಸಹ **ಶಾಖೆಗಳ ಅನುಭವ**ವನ್ನು ಪರಿಶೀಲಿಸಬೇಕು.

9. ಪಾರ್ಲಿಮೆಂಟ್ ಸದಸ್ಯರುಗಳ ಕೆಲಸವನ್ನು ಅವರು ಚುನಾಯಿತರಾಗಿರುವ ರಾಜ್ಯಗಳಿಗೆ ಸಂಬಂಧಿಸಿ, ಆ ಸಮಿತಿಗಳ ಕೆಲಸಕ್ಕೆ ಸಂಬಂಧಿಸಿ ಹೇಗೆ ರೂಪಿಸುವುದು? ಪ್ರಾಂತ ಸಮಿತಿಗಳ ನೇತೃತ್ವದಲ್ಲಿ ರಾಜ್ಯಗಳ ಶಾಸನ ಸಭೆಗಳಲ್ಲಿ. ನಮ್ಮ ಕಾಮ್ರೇಡುಗಳ ಕೆಲಸ ಹೇಗೆ ಸಾಗಿದೆ ಮತ್ತು ಕೆಲಸವನ್ನು ಉತ್ತಮಗೊಳಿಸಲು ಯಾವ ಕ್ರಮಗಳ ಅಗತ್ಯವಿದೆ?

10 **ಪೂರ್ಣಕಾಲದಸದಸ್ಯರುಗಳು:** ಪಾರ್ಟಿಯ ವಿಸ್ತರಣೆ ಮತ್ತು ಸಾಮೂಹಿಕ ಕಾರ್ಯದ ವಿಸ್ತರಣೆಯು ಸಾಕಷ್ಟು ಸಂಖ್ಯೆಯ ಪೂರ್ಣ ಕಾಲದ ಸದಸ್ಯರುಗಳು ಇಲ್ಲದೆ ಸಾಧ್ಯವಿಲ್ಲವೆಂಬುದು ಸಹಜ. ಈ ವಿಷಯದಲ್ಲಿ ಏನೇನು ಸಮಸ್ಯೆಗಳಿವೆ ಮತ್ತು ಅದನ್ನು ಹೇಗೆ ಪರಿಹರಿಸಲು ಸಾಧ್ಯ ?

11. **ಪಾರ್ಟಿಯ ಹಣಕಾಸಿನ ವ್ಯವಸ್ಥೆ** : ಎಲ್ಲ ಹಂತಗಳಲ್ಲಿಯೂ ಇದು ಅತ್ಯಂತ ಜರೂರಾದ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಪರಿಹರಿಸುವುದು ನಮ್ಮ ಸಮಾರ್ಥತೆಯ ಮೇಲೆ, ನಮ್ಮ ಕೆಲಸದ ಎಲ್ಲ ರೂಪಗಳೂ ಅವಲಂಬಿಸಿವೆ. ಅನೇಕ ಪ್ರಾಂತಗಳಲ್ಲಿ ಪ್ರಸಕ್ತ ಪರಿಸ್ಥಿತಿ ಏನೆಂದರೆ, ಪ್ರತಿ ಸಮಿತಿಯೂ ಸ್ವತಃ ತಾನೇ ಹಣ ವಸೂಲಿ ಮಾಡಬೇಕಾಗಿರುವುದು ಮತ್ತು ಕಾರ್ಯರೂಪದಲ್ಲಿ ಈ ಭಾರವು ಸಮಿತಿಯ ಮೂರು ನಾಲ್ಕು ಸದಸ್ಯರುಗಳ ಮೇಲೆಯೇ ಬೀಳುವುದು. ಅನೇಕ ಕಡೆಗಳಲ್ಲಿ ಪ್ರಧಾನವಾಗಿ ಹಣ ಸಂಗ್ರಹವು ಕೆಲವು ಹಿತೈಷಿಗಳಿಂದ ಮಾತ್ರ. ಅಂಥ ವಸೂಲಿಯು ಅನಿವಾರ್ಯವಾಗಿ ಅಲ್ಪವಾದುದು ಮತ್ತು ಕ್ರಮವಾಗಿ ಬಾರದಿರುವುದು. ಇದರ ಪರಿಣಾಮವಾಗಿ, ಅಷ್ಟಕಷ್ಟೇ ಸರಿಪಡಿಸುವ ಅವಸ್ಥೆ, ಯೋಜನೆಗಳನ್ನು ಕಾರ್ಯಗತ ಮಾಡದಿರುವುದು, ಅನೇಕ ತೀರ್ಮಾನಗಳನ್ನು ಕಾರ್ಯಗತ ಮಾಡದಿರುವುದು ಆಗಿದೆ.

ಪಾರ್ಟಿ ಸದಸ್ಯರುಗಳ ಮೇಲೆ ಅವರ ಆದಾಯಕ್ಕನುಸಾರವಾಗಿ ಪಾರ್ಟಿ ಲೆವಿಯನ್ನು ಹಂತ ಹಂತವಾಗಿ ನಿಗದಿ ಮಾಡುವ ಪದ್ಧತಿಯನ್ನು ಆದಷ್ಟು ಶೀಘ್ರವಾಗಿ ತರಬೇಕೆನ್ನುವ ಸೂಚನೆಯನ್ನು ಅನೇಕ ಕಾಮ್ರೇಡುಗಳು ಮಾಡಿರುತ್ತಾರೆ. ಅಲ್ಲದೆ ಕ್ರಮವಾಗಿ ತಪ್ಪದೆ ಸ್ವಲ್ಪ ಹಣ ಕೊಡುವವರ ಅಥವ ಧಾನ್ಯಗಳನ್ನು ಕೊಡುವವರ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಿಸಬೇಕು.

ಆದರೆ ಇದಿಷ್ಟೆ ಸಾಲದು. ಹಣ ವಸೂಲಿ ಮಾಡುವ ಕಾರ್ಯವನ್ನು ಸಂಪೂರ್ಣವಾಗಿ ಜಿಲ್ಲಾ ಘಟಕಗಳಿಗಷ್ಟೇ ಬಿಡುವುದು ಸರಿಯಲ್ಲ. ಕ್ರಮವಾಗಿ ನಿಧಿ ಸಂಗ್ರಹಣ (ಹಣ, ಧಾನ್ಯಗಳು ಇತ್ಯಾದಿ) ಕಾರ್ಯವನ್ನು ನಾವು ಜಾರಿಗೆ ತರಬೇಕು, ಇದನ್ನು ಪ್ರಾಂತ ಸಮಿತಿಗಳು ಏರ್ಪಾಡು ಮಾಡಬೇಕು, ವರ್ಷದಲ್ಲಿ ಒಂದು ತಿಂಗಳಾದರೂ, ತೀವ್ರವಾದ ಕಾರ್ಯಕ್ರಮ ಹಾಕಿಕೊಂಡು, ಇಡೀ ಪಾರ್ಟಿಯನ್ನು ಈ ಕಾರ್ಯದಲ್ಲಿ ಸಜ್ಜುಗೊಳಿಸಿ, ನಮ್ಮ ಪ್ರಭಾವವು ಇರುವ ಎಲ್ಲ ಪ್ರದೇಶಗಳಲ್ಲೂ ಸಂಗ್ರಹಣ ಮಾಡಬೇಕು. ಇಂದು ಇರತಕ್ಕ ನಮ್ಮ ಪರಿಸ್ಥಿತಿಯಲ್ಲಿ ಪ್ರಾಂತ ಸಮಿತಿಯು ಇದನ್ನು ಮುಖ್ಯ ಕಾರ್ಯವನ್ನಾಗಿ ಕೈಗೊಂಡಲ್ಲಿ, ದೊಡ್ಡ ಫಲಿತಾಂಶಗಳನ್ನು ಪಡೆಯಲು ಸಾಧ್ಯವಿದೆ. ಇದು ಪಾರ್ಟಿಯ ಧೋರಣೆಗಳನ್ನು ಜನಪ್ರಿಯಗೊಳಿಸುವುದಕ್ಕೂ ಮತ್ತು ಅದರ ಸಂದೇಶವನ್ನು ಜನಸಮೂಹಗಳ ನಡುವೆ ಕೊಂಡುಹೋಗುವುದಕ್ಕೂ ಸಹಾಯಕವಾಗುತ್ತದೆ.

ಇದಲ್ಲದೆ, ಪಾರ್ಟಿ ಮುದ್ರಣಾಲಯಕ್ಕೆ, ಕಟ್ಟಡಕ್ಕೆ ಇತ್ಯಾದಿಗಳಿಗೆ ವಿಶೇಷವಾದ ನಿಧಿ ಸಂಗ್ರಹಣೆಯನ್ನು ವಿಶಿಷ್ಟ ವಾರಗಳು ಅಥವಾ ತಿಂಗಳುಗಳಲ್ಲಿ ಮಾಡಬೇಕು, ಇಡೀ ಪಾರ್ಟಿಯನ್ನು ಈ ಕಾರ್ಯದಲ್ಲಿ ತರಬೇಕು.

12. ಚರ್ಚೆ ಮಾಡಬೇಕಿರುವ ಇನ್ನೊಂದು ಸಮಸ್ಯೆ ಎಂದರೆ ಕೇಂದ್ರ ಮತ್ತು ಪ್ರಾಂತ ಸಮಿತಿಯ ಕಛೇರಿಗಳಲ್ಲಿ ಮುದ್ರಣಾಲಯ ಮತ್ತು ಪುಸ್ತಕದ ಅಂಗಡಿಗಳಲ್ಲಿ ಕೆಲಸ ಮಾಡುತ್ತಿರುವ ಕಾಮ್ರೇಡುಗಳಿಗೆ ಸರಿಯಾದ ಪಾರ್ಟಿ ಜೀವನವನ್ನು ವ್ಯವಸ್ಥೆ ಮಾಡುವುದು ಮತ್ತು ಅವರು ಯಾವ ಘಟಕಕ್ಕೆ ಸೇರಿರಬೇಕು ಎನ್ನುವುದರ ಕುರಿತು ಸಾಮಾನ್ಯ ನಿಯಮಾವಳಿಯನ್ನು ಮಾಡುವುದು.

13. ಅನೇಕ ತಾತ್ವಿಕ ಪ್ರಶ್ನೆಗಳ ಮೇಲೆ ಸೈದ್ಧಾಂತಿಕ ಹಾಗೂ ವ್ಯಾವಹಾರಿಕ ಸ್ವಭಾವದ ಕುರಿತು ಒಮ್ಮತದ ಅಭಿಪ್ರಾಯವಿಲ್ಲದಿರುವುದೂ ಕೂಡ ಪಾರ್ಟಿಯಲ್ಲಿನ ಗೊಂದಲಕ್ಕೆ ಮತ್ತು ಐಕ್ಯತೆಯ ಸಡಿಲತೆಗೆ ಕಾರಣವಾಗಿದೆ.. ಈ ಪ್ರಶ್ನೆಗಳು ಯಾವುವು ಮತ್ತು ಯಾವುದಕ್ಕೆ ಉತ್ತರವು ಅಗತ್ಯವಿದೆ ಎಂಬುದನ್ನು ಸೂಚಿಸಬಹುದು.

14. ಎಲ್ಲದಕ್ಕಿಂತ ಮುಖ್ಯವಾಗಿ ಪಾರ್ಟಿಯ ಆಂತರಿಕ ಚಳುವಳಿಯನ್ನು ನ್ಯೂನತೆಗಳನ್ನು ನಿವಾರಿಸಲು 'ಯಾವ ಮುಖ್ಯ ಘೋಷಣೆಗಳ ಆಧಾರದ ಮೇಲೆ ನಡೆಸಬೇಕು ಎಂಬುದನ್ನು ಚರ್ಚಿಸಬೇಕಾಗಿದೆ.

ಮುಂದಿನ ಕಾಲಾವಧಿಯಲ್ಲಿ ಪಾರ್ಟಿಯನ್ನು ಪುನರ್ಘಟಿಸುವ ಕಾರ್ಯದಲ್ಲಿ ನೇರವಾಗಿ ಸಂಬಂಧವಿರುವ ಮುಖ್ಯವಾದ ಪ್ರಶ್ನೆಗಳು ಈ ಮೇಲೆ ಹೇಳಿದುದಾಗಿವೆ. ಪ್ರಾಂತ ಸಮ್ಮೇಳನಗಳ ಮತ್ತು ಪಾರ್ಟಿಯ ವಿಶೇಷ ಅಧಿವೇಶನವು ಘಟನೆಯ ಬದಲಾವಣೆಗಳನ್ನು ಮಾತ್ರವೇ ಅಲ್ಲದೆ, ಮೇಲೆ ನಮೂದಿಸಿರುವ ವಿಷಯಗಳನ್ನೂ ಚರ್ಚಿಸಬೇಕು, ಅವುಗಳನ್ನು ಯೋಜನಾಬದ್ಧವಾದ ರೀತಿಯಲ್ಲಿ ಬಗೆಹರಿಸಲು ಕಾರ್ಯರಂಭಮಾಡಬೇಕು. ಪ್ರಾಂತ ಸಮ್ಮೇಳನಗಳೇ ಆಗಲಿ, ಇಲ್ಲ ಪಾರ್ಟಿಯ ವಿಶೇಷ ಅಧಿವೇಶನವೇ ಆಗಲಿ ಈ ಎಲ್ಲ ಪ್ರಶ್ನೆಗಳ ಮೇಲೂ ಕೊನೆಯ ತೀರ್ಮಾನವನ್ನು ಕೊಡುವುದು ಎಂದು ಅಪೇಕ್ಷಿಸುವುದು ತಪ್ಪಾದೀತು. ಆದರೂ, ಪ್ರಾಂತೀಯ ವಿಶೇಷ ಸಮ್ಮೇಳನಗಳ ಕೆಲವು ವಿಷಯಗಳನ್ನು ಚರ್ಚಿಸಿ ಅದನ್ನು ಕೇಂದ್ರ ಸಮಿತಿಗೆ ಕಳಿಸಿಕೊಟ್ಟಲ್ಲಿ, ಕೇಂದ್ರ ಸಮಿತಿ ಅದನ್ನು ವಿಶೇಷ ಅಧಿವೇಶನದಲ್ಲಿ ಸೂಕ್ತ ರೀತಿಯಲ್ಲಿ ಮಂಡಿಸುವುದು. ಇದು ಚರ್ಚೆಗೆ ಬಹಳ ಅನುಕೂಲವಾಗುವುದು ಮತ್ತು ಪಾರ್ಟಿಯ ಆಂತರಿಕ ಚಳುವಳಿಗೆ ಆಧಾರವಾಗುವುದು.

ಪಾರ್ಟಿಯ ವಿಶೇಷ ಅಧಿವೇಶನಕ್ಕೆ ಸಿದ್ಧಗೊಳಿಸುವ ಅಂಗವಾಗಿ, ಪ್ರಾಂತ ಸಮಿತಿಗಳು ಮತ್ತು ಜಿಲ್ಲಾ ಸಮಿತಿಗಳು ಈ ಕೆಳ ಕಂಡ ಕನಿಷ್ಟ ಅಂಶಗಳನ್ನಾದರೂ ಸಿದ್ಧಗೊಳಿಸಿಬೇಕು :-

1. ಪ್ರಾಂತ ಸಮಿತಿಯ ಸದಸ್ಯರು ಮತ್ತು ಪ್ರಾಂತ ಸಮಿತಿ ಸೆಕ್ರೇಟೇರಿಯಟ್ಟಿನ ಸಂಖ್ಯೆ, ಹಿಂದಿನ ಸಮ್ಮೇಳನದಿಂದ ಈವರೆಗೆ ಪ್ರಾಂತ ಸಮಿತಿ ಮತ್ತು ಸೆಕ್ರೆಟೇರಿಯಟ್ಟು ಎಷ್ಟು ಬಾರಿ ಸೇರಿದ್ದಿತ್ತು ಮತ್ತು ಹಾಜರಿ ಇದ್ದ ಸದಸ್ಯರೆಷ್ಟು. ಪ್ರಾಂತ ಸಮಿತಿಯ ಅಡಿ ಎಷ್ಟು ಉಪಸಮಿತಿಗಳು ಇವೆ ಮತ್ತು ಹೇಗೆ ಕೆಲಸ ಮಾಡುತ್ತವೆ. ಪ್ರಾಂತ ಸಮಿತಿಯ ಆಯವ್ಯಯ. ಶಾಸನಸಭಾ ಸದಸ್ಯರ ಲೆವಿ ಮತ್ತು ಹಣ ಸಂಗ್ರಹಣೆ.

2. ಪ್ರಾಂತದಲ್ಲಿರುವ ಜಿಲ್ಲಾ ಘಟಕಗಳು, ಜಿಲ್ಲಾ ಘಟಕಗಳ ಅಡಿ ಇರುವ ಕೆಳಗಿನ ಘಟಗಳು, ಶಾಖೆಗಳು, ಪ್ರತಿ ಶಾಖೆಯಲ್ಲಿನ ಸದಸ್ಯರಸಂಖ್ಯೆ.

3. ಪ್ರತಿ ಜಿಲ್ಲೆಯಲ್ಲಿಯೂ ಇರುವ ಪಾರ್ಟಿ ಸದಸ್ಯರ ಸಂಖ್ಯೆ ಅವರು ಬಂದಿರುವ ವರ್ಗಗಳುಮತ್ತು ಉದ್ಯೋಗ, ಪೂರ್ಣಕಾಲ ಕೆಲಸ ಮಾಡುವವರ ಸಂಖ್ಯೆ, ಅವರಿಗೆ ಗೊತ್ತು ಮಾಡಿರುವ ವೇತನ ಮತ್ತು ಕೊಡುತ್ತಿರುವ ವೇತನ, ಜಿಲ್ಲಾ ಸಮಿತಿಯ ಸರಾಸರಿ ತಿಂಗಳಿನ ಆಯವ್ಯಯ ಸಾಲಗಳು, ಕೇಂದ್ರ ಮತ್ತು ಪ್ರಾಂತ ಪತ್ರಿಕೆಗಳ ಮಾರಾಟದ ಸಂಖ್ಯೆ.

---

## ಗೌರಿಬಿದನೂರು ರೈತರಿಗೆ ವ್ಯವಸಾಯ ಮಂತ್ರಿಗಳ ಭರವಸೆ ?

ಸಂಸ್ಥಾನದ ವ್ಯವಸಾಯ ಸಚಿವ ಶ್ರೀ ಎಚ್. ಎಸ್. ರುದ್ರಪ್ಪನವರು ನವಂಬರ 27ರಂದು ಗೌರಿಬಿದನೂರಿಗೆ ಭೇಟಿ ಇತ್ತರು. ಶ್ರೀ ಅನಂತರಾಜ್, ಶ್ರೀಪಾಲು, ಮುಂತಾದ ರೈತರು ಅನೇಕರು ಸಚಿವರಲ್ಲಿ ವ್ಯವಸಾಯದ ಇಲಾಖೆಯಲ್ಲಿ ಬಡ ರೈತರ ಸಲುವಾಗಿ ಇಟ್ಟಿರುವ ಟ್ರಾಕ್ಟರ್ ಬುಲ್ ಡೋಜರುಗಳಿಂದ, ಉಳಿಮೆ ಮಾಡಿಸಿಕೊಳ್ಳಲು ಎಕರೆ ಒಂದಕ್ಕೆ 25 ರೂ.ಗಳು ಇಟ್ಟಿರುವುದರಿಂದ, ಬಡ ರೈತರಿಗೆ ಬಹಳ ಅನಾನುಕೂಲವಾಗಿ, ಇರುತ್ತೆ. ಈ ರೇಟುಗಳಿಂದ ಟ್ರಾಕ್ಟರ್‌ಗಳನ್ನು ಉಪಯೋಗಿಸಿಕೊಳ್ಳಲು, ರೈತರು ಅಸಕ್ತರಾಗಿ ಇರುವುದರಿಂದ ಈ ಟ್ರಾಕ್ಟರ್‌ಗಳು ಕೆಲ್ಸವಿಲ್ಲದೆ ನಿಂತಿರುತ್ತವೆ. ಆದರಿಂದ, ಆಂಧ್ರ ಪ್ರದೇಶದಲ್ಲಿ ಇರುವಂತೆ, ಇಲ್ಲಿಯು, ಎಕರೆ ಉಳಿಮೆಗೆ ನ್ಯಾಯವಾದ ರೇಟನ್ನು ನಿಗದಿ ಮಾಡಿ ರೈತರಿಗೆ ಸಹಾಯ ಮಾಡಬೇಕೆಂದು ತಿಳಿಸಿದ್ದರು.

ಮಾನ್ಯ ಸಚಿವರು ಗಮನಿಸುವುದಾಗಿ ಉತ್ತರ ನೀಡಿದರು ನಮ್ಮ ಮಾನ್ಯ ಸಚಿವರುಗಳೆಲ್ಲ ಸಂಭಾವಿತರೆಂಬುದಕ್ಕೆ ಸಂಶಯವೇ ಇಲ್ಲ. ಯಾರು ಸಂಕಟ ತೋಡಿಕೊಂಡರೂ ಅದನ್ನು ಕೇಳಿ ಗಮನಿಸುವ ಭರವಸೆ ಈಯುವ ಉತ್ತಮ ಸಂಭಾವಿತರ ಸಲಕ್ಷಣಗಳೆಲ್ಲಾ ನಮ್ಮ ಸಚಿವರುಗಳಲ್ಲಿವೆ ಎಂಬುದು ಖಂಡಿತ. ಆದರೆ ಈ ಗಮನಿಸಿದ ವಿಷಯದ ಬಗ್ಗೆ ತುರ್ತಿನ ಕ್ರಮ ವಹಿಸುವ ಗಮನ ಮಾತ್ರ ಇವರಿಗಿಲ್ಲ. ಆದರೆ, ಇಲ್ಲೂ ಅದೇ ರೀತಿ ಮಾನ್ಯ ಸಚಿವರು ವರ್ತಿಸಲಾರರೆಂದು ಭಾವಿಸೋಣ !

**REG. No. M. 6867**

Edited Printed and Published by C. R. Krishna Rao, at Janashakthi Printers,
L—59, K. V. Temple St., Sultanpet Bangalore—2 phone · 3810